WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50



# ಶ್ರೀ ಶಾರದಾ

ಮಾಸಪತ್ರಿಕೆ – 15 ಮೇ 2011

॥ ಧಿಯೋ ಯೋನಃ ಪ್ರಚೋದಯಾತ್ ॥

**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754
ಸಂಪುಟ-11 ಸಂಚಿಕೆ-5 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ – ಡಾ। ಎಚ್.ವಿ.ನರಸಿಂಹಮೂರ್ತಿ ಪುಟ–5
ಶ್ರೀ ಕೃಷ್ಣಾಯನ – ಕೆ. ಆತ್ಮಾರಾಮ ಶಾಸ್ತ್ರೀ, ಬೆಂಗಳೂರು ಪುಟ–2

ತ್ಯಾಗ ಸಾಂತೂರು ಸದಾಶಿವ ರಾವ್ ಪುಟ–4

ಪರಿಸರ ಸಂರಕ್ಷಣೆ ವೈ. ಮೋಹನರಾವ್ ಪುಟ–4


## ಶ್ರೀಶಾರದಾ ಮಂಟಪದಲ್ಲಿ ಸಾಮೂಹಿಕ ದುರ್ಗಾ ನಮಸ್ಕಾರ ಪೂಜೆ

ಪ್ರತಿವರ್ಷದಂತೆ ನಡೆಯುವ ಸಾಮೂಹಿಕ ದುರ್ಗಾನಮಸ್ಕಾರ ಪೂಜೆಯು ಈ ಬಾರಿ ತಾ.29-4-2011ರಂದು ಶುಕ್ರವಾರ ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

ಅಪರಾಹ್ನ 3-00ರಿಂದ ಶ್ರೀ ಕಿಗ್ಗ ನಾಗಭೂಷಣ ಶಾಸ್ತ್ರಿ ಇವರ ನೇತೃತ್ವದಲ್ಲಿ ದೀಪವಿಟ್ಟು ಮಂಡಲ ರಚಿಸಿ ಪೂಜೆಯ ಶುಭಾರಂಭವಾಯಿತು. ನಮ್ಮ ಸಮಾಜದ ಸ್ವಾಧ್ಯಾಯ ತಂಡದವರಿಂದ ದುರ್ಗಾಸಪ್ತಶತೀ ಪಾರಾಯಣ ನಡೆಯಿತು. ಪೂಜಾ ಕರ್ತೃಗಳಾಗಿ ಶ್ರೀ ಕೃಷ್ಣಕುಮಾರ್‌ರಾವ್ ಮಟ್ಟು ದಂಪತಿಗಳು ಸಹಕರಿಸಿದರು. ಶ್ರೀಶಾರದಾ ದೇವಸ್ಥಾನದಲ್ಲಿ ಮಹಿಳೆಯರಿಂದ ಸಾಮೂಹಿಕ ಭಜನೆ, ಲಲಿತಾ ಸಹಸ್ರನಾಮ ಪಾರಾಯಣ, ಅಷ್ಟೋತ್ತರ ಕುಂಕುಮಾರ್ಚನೆ, ಪುಷ್ಪಾಂಜಲಿ ನಮಸ್ಕಾರಗಳು ನಡೆದವು.

ಸೇವಾ ಕರ್ತೃಗಳಿಂದ ಪೂಜಾ ಸಂಕಲ್ಪ ಮುಗಿದು ರಾತ್ರಿ 8 ಗಂಟೆಗೆ ಮಹಾಪೂಜೆ ನೆರವೇರಿತು. ತೀರ್ಥ ಪ್ರಸಾದ ವಿತರಣೆ ಬಳಿಕ ಭೋಜನ ಪ್ರಸಾದ ನಡೆಯಿತು. ಈ ಸಾಮೂಹಿಕ ಪೂಜೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಸಮಾಜ ಬಾಂಧವರು ಹಾಗೂ ಪರಿಸರದ ಭಕ್ತ ಬಾಂಧವರು ಪಾಲ್ಗೊಂಡು ಶ್ರೀದೇವಿಯ ಕೃಪೆಗೆ ಪಾತ್ರರಾದರು.

## ಮಣಿಪಾಲ : ಪ್ರಸನ್ನ ಗಣಪತಿ ಭಜನಾ ಮಂಡಳಿ ಉದ್ಘಾಟನೆ



ಮಣಿಪಾಲದ ಜಲಲಕ್ಷ್ಮೀ ಚಾರಿಟೇಬಲ್ ಟ್ರಸ್ಟ್ ಮತ್ತು ಅಂಬಲಪಾಡಿ ಜನಾರ್ದನ ಮಹಾಕಾಳಿ ದೇವಸ್ಥಾನದ ಸಂಯುಕ್ತ ಆಶ್ರಯದಲ್ಲಿ ಪ್ರಸನ್ನ ಗಣಪತಿ ಭಜನಾ ಮಂಡಳಿ ಮತ್ತು ವಸಂತ ಭಜನಾ ಕಮ್ಮಟದ ಉದ್ಘಾಟನೆ ಮಣಿಪಾಲ ಪ್ರಸನ್ನ ಗಣಪತಿ ದೇವಸ್ಥಾನದ ಎದುರಿನ 'ಜಲಪ್ರಭಾ'ದಲ್ಲಿ ಶನಿವಾರದಂದು ಜರಗಿತು.

ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಉದ್ಘಾಟನೆ ನೆರವೇರಿಸಿದರು. ಅಂಬಲಪಾಡಿ ಶ್ರೀ ಜನಾರ್ದನ ಮಹಾಕಾಳಿ ದೇವಸ್ಥಾನದ ಧರ್ಮದರ್ಶಿ ಶ್ರೀ ನಿ.ಬಿ. ವಿಜಯ ಬಲ್ಲಾಳ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ತಿರುಪತಿ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ದಕ್ಷಿಣ ಕನ್ನಡ ವಿಭಾಗದ ಮುಖ್ಯಸ್ಥ ಗೋಪಾಲಾಚಾರ್, ಮಣಿಪಾಲದ ವೇದಾಚಲ ಟ್ರಸ್ಟ್‌ನ ಅಧ್ಯಕ್ಷ ಬೆಳ್ಳಿಪಾಡಿ ಹರಿಪ್ರಸಾದ್ ರೈ, ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಅಧ್ಯಕ್ಷ ಸಿ.ಎಸ್.ರಾವ್, ವೇದಾಚಲ ಟ್ರಸ್ಟ್ ಕಾರ್ಯದರ್ಶಿ ನಾರಾಯಣ ಭಟ್, ಮಣಿಪಾಲದ ಜಲಲಕ್ಷ್ಮೀ ಸಂಗೀತ ನೃತ್ಯ ವಿದ್ಯಾಲಯದ ಪ್ರಾಂಶುಪಾಲೆ ಉಷಾ ಹೆಬ್ಬಾರ್ ಮೊದಲಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮಣಿಪಾಲ ಜಲಲಕ್ಷ್ಮೀ ಚಾರಿಟೇಬಲ್ ಟ್ರಸ್ಟ್‌ನ ಸ್ಥಾಪಕ ಟ್ರಸ್ಟಿ ಬೈಲೂರು ಬಾಲಚಂದ್ರ ರಾವ್ ಸ್ವಾಗತಿಸಿದರು. ಹೇಮ ಕಾರ್ಯಕ್ರಮ ನಿರ್ವಹಿಸಿದರು.

## "ಶ್ರೀರಾಮ ಧಾಮ" ಧ್ಯಾನಮಂದಿರ, ಜೋಗುಳಬೆಟ್ಟು, ಕಾರ್ಕಳ ತೃತೀಯ ವಾರ್ಷಿಕ ಪ್ರತಿಷ್ಠಾಪನಾ ಹಾಗೂ ರಾಮನವಮಿ ಆಚರಣೆ

ವರದಿ : **ಜಿ.ಕೆ.ಕೋಲ್ಪೆ, ಕಡಬ**

ಕಾರ್ಕಳದ 'ಶ್ರೀರಾಮಧಾಮ' ಧ್ಯಾನ ಮಂದಿರದಲ್ಲಿ ತಾ.11-4-2011ರಂದು ತೃತೀಯ ವಾರ್ಷಿಕ ಪ್ರತಿಷ್ಠಾಪನಾ ಸಮಾರಂಭವು ಕೋಲ್ಪೆ ಕುಟುಂಬಸ್ಥರಿಂದ ಸಂಭ್ರಮದಿಂದ ಆಚರಿಸಲ್ಪಟ್ಟಿತು. ಆ ದಿನ ಬೆಳಿಗ್ಗೆಯಿಂದಲೇ ಪಾವಂಜೆಯಲ್ಲಿರುವ ವೇದಮೂರ್ತಿ ಕಬ್ಬಿನಾಲೆ ದೇವರಾಜ ಹೆಬ್ಬಾರರ ಪೌರೋಹಿತ್ಯ ಸಾರಥ್ಯದಲ್ಲಿ ಪುರೋಹಿತರುಗಳಾದ ಪಾವಂಜೆ ಎಮ್. ಸುಬ್ರಹ್ಮಣ್ಯ ಭಟ್ ಮತ್ತು ಬೆಳ್ಳೆ ಶ್ರೀ ಅರವಿಂದ ಶರ್ಮರವರು, ಶುದ್ಧ ಪುಣ್ಯಾರ್ಚನೆ, ಗಣಹೋಮ ಹಾಗೂ ಏಕಾದಶ ರುದ್ರಾಭಿಷೇಕ ಮಾಡಿ, ಮಧ್ಯಾಹ್ನ ಶ್ರೀರಾಮನಿಗೆ ಸಹಸ್ರಾರ್ಚನೆ ಸಹಿತ ಶ್ರೀ ಗೋಪಾಲಕೃಷ್ಣ ಕೋಲ್ಪೆಯವರ ಮೂಲಕ ಮಹಾಪೂಜೆ ನೆರವೇರಿಸಿದರು. ಆನಂತರ, ಆಮಂತ್ರಿತ ಬಂಧು-ಬಳಗದವರು ಪ್ರಸಾದ ಭೋಜನ ಸ್ವೀಕರಿಸಿದರು.

ಅಪರಾಹ್ನ ಗಂಟೆ 3ರಿಂದ 5ರ ತನಕ 'ಶ್ರೀಶಾರದಾ ಭಜನಾ ಮಂಡಳಿ', ಅನಂತಶಯನ, ಕಾರ್ಕಳದವರಿಂದ ಭಜನಾ ಕಾರ್ಯಕ್ರಮ ನಡೆಯಿತು. ಅದೇ ದಿನ ರಾತ್ರಿ ಸಪ್ತಶತಿ ಪಾರಾಯಣ ಸಹಿತ ದುರ್ಗಾ ನಮಸ್ಕಾರ ಪೂಜೆಯನ್ನು ನೆರವೇರಿಸಿ ಕೋಲ್ಪೆ ಕುಟುಂಬಸ್ಥರನ್ನು ಮಂತ್ರಾಕ್ಷತೆಯೊಂದಿಗೆ ಪುರೋಹಿತರು ಆಶೀರ್ವಚಿಸಿದರು.

ತಾ.12-04-2011ರಂದು 'ಶ್ರೀರಾಮ ನವಮಿ'ಯನ್ನು, ಪಂಚಾಮೃತ ಅಭಿಷೇಕ, ಸಹಸ್ರನಾಮ ಅರ್ಚನೆ ಸಹಿತ ಮಹಾಪೂಜೆಯನ್ನು ಪುರೋಹಿತ ಹೆಜಮಾಡಿ ಕೃಷ್ಣಭಟ್‌ರವರು ಯಶಸ್ವಿಯಾಗಿ ನಡೆಸಿಕೊಟ್ಟರು. ಬಂಧು-ಬಳಗ ಅಲ್ಲದೆ ಭಾಗಿಗಳಾದ ನೆರಕರೆಯವರಿಗೆ ಪ್ರಸಾದ ಭೋಜನ ಏರ್ಪಡಿಸ ಲಾಗಿತ್ತು. 'ಶ್ರೀರಾಮಧಾಮ' ಧ್ಯಾನಮಂದಿರದ ಉಸ್ತುವಾರಿ ವಹಿಸಿರುವ ಶ್ರೀ ಶಶಿಧರ ರಾವ್ ಕೋಲ್ಪೆ, ಸಹೋದರ ಚಂದ್ರಶೇಖರ ಇವರ ಸಹಕಾರದೊಂದಿಗೆ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕುಟುಂಬದ ಹಿರಿಯರಾದ ಶ್ರೀ ಗೋಪಾಲಕೃಷ್ಣ ಕೋಲ್ಪೆ ದಂಪತಿಯವರು ಪೂಜಾದಿಗಳಲ್ಲಿ ಭಾಗವಹಿಸಿ ಕಿರಿಯರನ್ನು ಆಶೀರ್ವದಿಸಿದರು. ಅವರಿಗೂ-ಅವರ ಸಂಸಾರಕ್ಕೂ 'ಧ್ಯಾನಮಂದಿರ' ಹಾಗೂ ಕಾರ್ಯಕ್ರಮಗಳಿಗೆ ಬೆನ್ನೆಲುಬಾಗಿ ನಿಂತಿರುವ ಶ್ರೀರಾಮಚಂದ್ರನು 'ಆಯುರಾರೋಗ್ಯ ಭಾಗ್ಯ ಕರುಣಿಸಲಿ' ಎಂಬುದು ಕುಟುಂಬಸ್ಥರೆಲ್ಲರ ಹಾರೈಕೆ.

## ಮಟ್ಟು : ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕುಂಜಿಬೆಟ್ಟು ಉಡುಪಿ ಇವರಿಂದ ಯಕ್ಷಗಾನ ಬಯಲಾಟ-'ಮಧುರಾ ಮಹೀಂದ್ರ'

ಉಡುಪಿ ತಾಲೂಕು ಮಟ್ಟು ಶ್ರೀ ವಿಷ್ಣುಮೂರ್ತಿ ದೇವರ ವಾರ್ಷಿಕ ಉತ್ಸವದ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವಾಗಿ ತಾ.12-4-2011ರಂದು ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಕುಂಜಿಬೆಟ್ಟು ಉಡುಪಿ ಇದರ ಕಲಾವಿದರಿಂದ ಮಧುರಾ ಮಹೇಂದ್ರ ಯಕ್ಷಗಾನ ಬಯಲಾಟ ಪ್ರದರ್ಶನಗೊಂಡಿದ್ದು ಸಂಜೆ 7-30ಕ್ಕೆ ಪ್ರಾರಂಭಗೊಂಡ ಕಾರ್ಯಕ್ರಮವು ರಾತ್ರಿ 12-30ರ ವರೆಗೆ ನಡೆದು ಜನಮೆಚ್ಚುಗೆಯನ್ನು ಪಡೆಯಿತು. ಈ ಕಾರ್ಯಕ್ರಮದ ಪ್ರಾಯೋಜಕರಾಗಿ ಉಡುಪಿ ಅಂಬಲ್ಪಾಡಿಯ ಹೈಟೆಕ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಟಿ.ವಿ.ರಾವ್ ಮಟ್ಟು ಸಹಕರಿಸಿದರು.

ಬಾರಕೂರು ಶ್ರೀದೇವದಾಸಕೂಡ್ಲಿಯವರ ನಿರ್ದೇಶನದಲ್ಲಿ ಶ್ರೀಶಾರದಾ ಹವ್ಯಾಸಿ ಯಕ್ಷಗಾನ ಕಲಾವಿದರು ಹಲವಾರು ಪ್ರಸಂಗಗಳನ್ನು ಕರಗತ ಮಾಡಿಕೊಂಡಿದ್ದು, ಈಗಾಗಲೇ ಹಲವು ಕಡೆ ಯಕ್ಷಗಾನ ಪ್ರದರ್ಶನಗಳನ್ನು ನೀಡಿದ್ದು, ಯಾವುದೇ ಸಮಾರಂಭದಲ್ಲಿಯೂ ಯಕ್ಷಗಾನ ಪ್ರದರ್ಶನ ನೀಡಲು ಸಿದ್ಧರಿದ್ದು ಸಮಾಜಬಾಂಧವರ ಹೆಚ್ಚಿನ ಪ್ರೋತ್ಸಾಹ, ಸಹಕಾರಗಳನ್ನು ಬಯಸುತ್ತಾರೆ. ಆಸಕ್ತರು ಈ ಬಗ್ಗೆ ಶಾರದಾ ಮಂಟಪದ ಮೆನೇಜರ್‌ರಲ್ಲಿ ವಿಚಾರಿಸಬೇಕಾಗಿ ವಿನಂತಿ.



**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎನ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಮೂಢನಂಬಿಕೆ ಇದು ಹಿಂದಿನ ಕಾಲಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ, ಹಿಂದೆಯೂ ಈಗಲೂ ನಡೆಯುತ್ತ ಇರುವ ಒಂದು ಸತ್ಯ. ಹಿಂದೆ ಬಳಸುತ್ತಿದ್ದ ಮೂಢನಂಬಿಕೆಗಳು ಕೆಲವಾದರೂ ವೈಜ್ಞಾನಿಕ ಕಾರಣಗಳಿಂದ ಆಚರಿಸಲ್ಪಡುತ್ತಿತ್ತು. ಅದರ ವೈಜ್ಞಾನಿಕ ಕಾರಣವೇನೆಂದು ತಿಳಿಯದೆ ಅದು ಬಳಕೆಯಲ್ಲಿತ್ತು. ಪರಂಪರಾನುಗತವಾಗಿ ಅದು ಆಚರಣೆಯಲ್ಲಿತ್ತು. ಇಂದಿಗೂ ಇದೆ.


ಮೇಲಿನ ಯಾವುದೇ ಮೂಢನಂಬಿಕೆಗಳನ್ನು ನಾವು ಹಣ ಕೊಟ್ಟು ಆಚರಿಸುತ್ತಿಲ್ಲ. ಯಾವುದೇ ಖರ್ಚು ಇಲ್ಲದೆ ಅದನ್ನು ಬಳಸುತ್ತಿದ್ದೆವು.

ಇಂದಿನ ವಿಜ್ಞಾನ ಯುಗದಲ್ಲಿ ನಾವು ಹಣ ಕೊಟ್ಟು ಮೂಢನಂಬಿಕೆ ಕೊಳ್ಳುತ್ತೇವೆ-ಆಚರಿಸುತ್ತೇವೆ. ಸಮೂಹ ಮಾಧ್ಯಮಗಳಾದ ಪತ್ರಿಕೆ, ಟಿ.ವಿ., ರೇಡಿಯೋಗಳಲ್ಲಿ ಬರುವ ಜಾಹೀರಾತು ನೋಡುತ್ತೇವೆ. ''ಕೇವಲ ಏಳು ದಿನಗಳಲ್ಲಿ ಕರಿಯ ಚರ್ಮವು ಬಿಳಿಯಾಗುತ್ತದೆಂದೋ, ಶೇವಿಂಗ್ ಲೋಷನ್ ಉಪಯೋಗಿಸಿದ ಮಹಿಳೆಯರು ಕಾಮೋದ್ರೇಕ ಗೊಳ್ಳುತ್ತಾರೆಂದೋ.... ಇತ್ಯಾದಿ ಜಾಹೀರಾತುಗಳಲ್ಲಿ ನೋಡಿಲ್ಲವೇ? ಅದಕ್ಕಾಗಿ ತರಬೇತಿ ಹೊಂದಿದ ನಟರು-ವೈದ್ಯರಾಗಿಯೋ, ಪ್ರೊಫೆಸರ್‌ಗಳಾಗಿಯೋ, ಆಧುನಿಕ ಮಹಿಳೆಯಾಗಿಯೋ, ಕ್ರೀಡಾಪಟುವಾಗಿಯೋ, ರಾಜಕಾರಣಿಯಾಗಿಯೋ, ಪ್ರತಿಭಾವಂತ ವಿದ್ಯಾರ್ಥಿಯಾಗಿಯೋ ನಟಿಸಿ, ಓದುವ-ಕೇಳುವ-ನೋಡುವ ಜನರಿಗೆ ಸುಳ್ಳು ಮಾಹಿತಿಯನ್ನೂ, ತಪ್ಪು ಅಂಕಿ ಅಂಶಗಳನ್ನೂ ನೀಡಿ, ತಮ್ಮ ಸರಕಿನಲ್ಲಿ ಇಲ್ಲ ಸಲ್ಲದ ಗುಣಗಳಿವೆ ಎಂದು ನಂಬುವಂತೆ ಮಾಡುತ್ತಾನೆ.

ಇದನ್ನು ಓದಿದ, ಕೇಳಿದ, ನೋಡಿದ ಸಾಮಾನ್ಯ ಜನ ಆ ವಸ್ತುವಿನ ಮೇಲೆ ನಂಬಿಕೆ ಇಟ್ಟು ಮರುದಿನ ಮಾರುಕಟ್ಟೆಗೆ ಹೋಗಿ ಅದನ್ನೇ ವ್ಯಾಪಾರಿ ಕೇಳಿದಷ್ಟು ದುಡ್ಡು ಕೊಟ್ಟು ಖರೀದಿಸುತ್ತಾರೆ. ಬಳಸಿದ ಆತ ಕೆಲವೊಮ್ಮೆ ''ನಾನು ಆ ವಸ್ತುವನ್ನು ಉಪಯೋಗಿಸಿದ್ದೇನೆ. ಜಾಹೀರಾತಿನಲ್ಲಿ ಹೇಳಿದಂತೆ ಈಗ ನಾನಿದ್ದೇನೆ'' ಎಂದು ಭ್ರಮಿಸುತ್ತಾನೆ. ಕೆಲವೊಮ್ಮೆ ಉಪಯೋಗಿಸಿಯೂ ತನ್ನಲ್ಲಿ ಬದಲಾವಣೆ ಕಾಣದಿದ್ದಾಗ ಮತ್ತೆ ಮತ್ತೆ ಕೊಂಡು ಉಪಯೋಗಿಸಿ ಭ್ರಮೆಗೆ ಒಳಪಡುತ್ತಾನೆ. ಹೀಗೆ ನಾವು ಈ ವಿಜ್ಞಾನ ಯುಗದಲ್ಲಿ ಮೂಢನಂಬಿಕೆಯನ್ನು ಹಣಕೊಟ್ಟು ಪಡೆಯುತ್ತೇವೆ ಎಂದು ತಿಳಿಯೋಣವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರಿ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ದೇವತೆಗಳು ಅವನಿಗೆ ನಿದ್ರೆಯ ವರವನ್ನಿತ್ತರು. ಆಗ ಅವರೆಂದದ್ದು ''ಯಾರಾದರೂ ಮಧ್ಯದಲ್ಲಿ ನಿನ್ನ ನಿದ್ರೆಗೆ ಅಡ್ಡಿಪಡಿಸಿದರೆ ಅವರು ನಿನ್ನ ದೃಷ್ಟಿ ಮಾತ್ರದಿಂದ ಸುಟ್ಟು ಬೂದಿಯಾಗಲಿ'' ಇದಕ್ಕಾಗಿಯೇ ಶ್ರೀಕೃಷ್ಣನು ಉಪಾಯಮಾಡಿ ಕಾಲಯವನನು ಮುಚುಕುಂದನಿಂದ ಸುಟ್ಟು ಹೋಗುವಂತೆ ಮಾಡಿದ್ದು. ಇದಾದ ಕೂಡಲೆ ಭಗವಂತನು ಮುಚುಕುಂದನಿಗೆ ತನ್ನ ನಿಜರೂಪದಲ್ಲಿ ಕಾಣಿಸಿಕೊಂಡನು. ಆದರೆ ಮುಚುಕುಂದನಿಗೆ ಮುಕುಂದನ ಗುರುತು ಸಿಗಲಿಲ್ಲ. ಕುತೂಹಲದಿಂದ ಅವನಾರೆಂದು ಪ್ರಶ್ನಿಸಿದನು. ಭಗವಂತನು ತಾನೇ ಜಗದೀಶನೆಂಬುದನ್ನು ಮನವರಿಕೆ ಮಾಡಿಕೊಟ್ಟು ವರವನ್ನು ಕೇಳುವಂತೆ ಹೇಳಿದನು. ಆದರೆ ಮುಚುಕುಂದನು ಪರಮಾತ್ಮನ ಸ್ತುತಿಮಾಡಿದನೇ ಹೊರತು ಯಾವುದೇ ವರವನ್ನ ಬೇಡಲಿಲ್ಲ. ಇದರಿಂದ ಸಂತುಷ್ಟನಾದ ಭಗವಂತನು ಅವನ ಲೋಭರಾಹಿತ್ಯವನ್ನು ಪ್ರಶಂಸಿಸಿ ತನ್ನನ್ನು ಕುರಿತು ತಪಸ್ಸು ಮಾಡಿ ಪರಿಶುದ್ಧನಾಗಬೇಕೆಂದೂ, ಮುಂದಿನ ಜನ್ಮದಲ್ಲಿ ಸರ್ವಭೂತಹಿತದಲ್ಲೇ ನಿರತನಾದ ಬ್ರಾಹ್ಮಣನಾಗಿ ಹುಟ್ಟಿ ಅಂತ್ಯದಲ್ಲಿ ಮೋಕ್ಷ ಪಡೆಯುವನೆಂದೂ ಹೇಳಿದನು. ಮುಚುಕುಂದನು ಭಗವಂತನಿಗೆ ಪ್ರದಕ್ಷಿಣೆ ಬಂದು ನಮಸ್ಕರಿಸಿ ಅಲ್ಲಿಂದ ಗಂಧಮಾದನ ಪರ್ವತದ ಬದರಿಕಾಶ್ರಮಕ್ಕೆ ಹೋಗಿ ಅಲ್ಲಿ ಶಾಂತಚಿತ್ತದಿಂದ ತಪೋನಿರತನಾದನು.

ಶ್ರೀಕೃಷ್ಣನು ಮುಚುಕುಂದನನ್ನು ಅನುಗ್ರಹಿಸಿ ಮಥುರೆಗೆ ಬಂದನು. ಅಲ್ಲಿ ಕಾಲಯವನನ ಸೈನ್ಯವಿತ್ತು. ಅದನ್ನು ಸಂಹರಿಸಿ ಅದಕ್ಕೆ ಸೇರಿದ ಸಂಪತ್ತನ್ನು ಮನುಷ್ಯರಿಂದ, ಎತ್ತುಗಳಿಂದ ಹೊರಿಸಿಕೊಂಡು ಹೋಗುವಾಗ ಜರಾಸಂಧ ಮತ್ತವನ ಇಪ್ಪತ್ತಮೂರು ಅಕ್ಷೋಹಿಣಿ ಸೈನ್ಯ ಎದುರಾಯಿತು. ಅಷ್ಟರಲ್ಲಿ ಬಲರಾಮನೂ ಅಲ್ಲಿಗೆ ಬಂದನು. ಇಬ್ಬರೂ ಮಾನುಷಲೀಲೆಯನ್ನು ತೋರಿಸುವುದಕ್ಕಾಗಿ ಹೆದರಿದವರಂತೆ ನಟಿಸುತ್ತ ಅಲ್ಲಿಂದ ಪಲಾಯನ ಮಾಡಿದರು. ಸಂಪತ್ತನ್ನು ದಾರಿಯಲ್ಲೆ ಬಿಟ್ಟುಬಿಟ್ಟರು. ಹೆದರಿ ಓಡುತ್ತಿದ್ದ ಅವರನ್ನು ನೋಡಿ ಜರಾಸಂಧನು ಜೋರಾಗಿ ನಗುತ್ತ ಅವರನ್ನು ಸೈನ್ಯದೊಂದಿಗೆ ಬೆನ್ನಟ್ಟಿದನು. ಅವರಿಬ್ಬರೂ ನಿತ್ಯವೂ ಮಳೆಬೀಳುವ ಪ್ರವರ್ಷಣವೆಂಬ ಪರ್ವತವನ್ನೇರಿ ಒಂದು ಗುಹೆಯೊಳಗೆ ಅವಿತು ಕುಳಿತರು. ಜರಾಸಂಧನಿಗೆ ಅವರು ಕಾಣಿಸಲೇ ಇಲ್ಲ. ಆಗ ಅವನು ಪರ್ವತದ ಸುತ್ತಲೂ ಬೆಂಕಿಹಾಕಿಸಿದನು. ರಾಮ, ಕೃಷ್ಣರು ಪರ್ವತದ ತುದಿಯಿಂದ ಕೆಳಗೆ ಜಿಗಿದರು. ಬೆಂಕಿ, ಹೊಗೆಗಳಿಂದಾಗಿ ಅವರು ಯಾರಿಗೂ ಕಾಣಿಸಲಿಲ್ಲ. ಅಲ್ಲಿಂದ ಅವರು ನೇರವಾಗಿ ದ್ವಾರಕೆಗೆ ಹೋದರು. ಅವರಿಬ್ಬರೂ ಬೆಂಕಿಯಲ್ಲಿ ಸುಟ್ಟುಹೋಗಿರಬೇಕೆಂದು ಭಾವಿಸಿ ಜರಾಸಂಧನು ತನ್ನ ಮಗಧದೇಶಕ್ಕೆ ಹೊರಟು ಹೋದನು.

### ೧೩

ಹಿಂದೆ ಆನರ್ತದೇಶದಲ್ಲಿ ಕಕುದ್ಮಿ ಎಂಬ ಮಹಾಪ್ರಭಾವಶಾಲಿ ರಾಜನಿದ್ದನು. ಅವನಿಗೆ ರೇವತನೆಂಬ ನಾಮಾಂತರವೂ ಇತ್ತು. ಅವನ ಮಗಳು ರೇವತಿ. ಅವಳ ಗುಣ, ರೂಪಗಳಿಗೆ ಮರುಳಾದ ಅನೇಕ ರಾಜಕುಮಾರರು ಅವಳನ್ನು ವಿವಾಹವಾಗಲು ಬಯಸಿಬಂದರು. ಬಂದವರೆಲ್ಲ ಎಲ್ಲ ರೀತಿಯಿಂದಲೂ ಯೋಗ್ಯರೇ ಆಗಿದ್ದರು. ಆದುದರಿಂದ ಮಗಳನ್ನು ಯಾರಿಗೆ ಕೊಡುವುದೆಂದು ನಿಶ್ಚಯಿಸಲಾರದಾದನು. ಕೊನೆಗೆ ಬ್ರಹ್ಮದೇವನನ್ನೇ ಕೇಳಿ ಅವನ ಆದೇಶದಂತೆ ನಡೆದುಕೊಳ್ಳುವುದೆಂದು ನಿರ್ಧರಿಸಿ ಮಗಳನ್ನು ಕರೆದುಕೊಂಡು ಬ್ರಹ್ಮಲೋಕಕ್ಕೆ ಹೋದನು. ಆಗ ಅಲ್ಲಿ ದೊಡ್ಡ ಗೋಷ್ಠಿ ನಡೆಯುತ್ತಿತ್ತು. ಅದು ಮುಗಿಯಲೆಂದು ಅವನು ಕಾದುಕುಳಿತನು. ಗೋಷ್ಠಿ ಮುಗಿಯಲು ಕಕುದ್ಮಿಯು ಬ್ರಹ್ಮನನ್ನು ವಂದಿಸಿ ಅವನ ಮುಂದೆ ನಿಂತನು. ಬ್ರಹ್ಮನು, ''ಏನು ವಿಷಯ?'' ಎಂದು ಕೇಳಲು ಮಗಳ ವಿವಾಹವನ್ನು ಪ್ರಸ್ತಾಪಿಸಿ, ವಿವಾಹೇಚ್ಛುಗಳಾಗಿ ಬಂದ ರಾಜಕುಮಾರರಲ್ಲಿ ಯಾರನ್ನು ಆಯ್ಕೆ ಮಾಡುವುದೆಂದು ಕೇಳಿದನು. ಆಗ ಬ್ರಹ್ಮನು ನಕ್ಕು, ''ರೇವತ, ನಿನ್ನ ಮರ್ತ್ಯಲೋಕದಲ್ಲಿ ಈಗ ಅನೇಕ ಯುಗಗಳೇ ಕಳೆದು ಹೋಗಿದೆ. ನೀನು ಹೇಳುವ ರಾಜಪುತ್ರರ ಅನೇಕ ತಲೆಮಾರುಗಳು ಆಗಿಹೋಗಿವೆ. ನನ್ನ ಲೋಕದಲ್ಲಿದ್ದುದರಿಂದ ಇದು ನಿನಗೆ ತಿಳಿಯಲಿಲ್ಲ. ಈಗ ಭೂಮಿಯ ಮೇಲೆ ಶ್ರೀಮನ್ನಾರಾಯಣನೂ, ಮಹಾಶೇಷನೂ ಕೃಷ್ಣ ರಾಮರಾಗಿ ಅವತರಿಸಿದ್ದಾರೆ. ನೀನು ನಿನ್ನ ಮಗಳನ್ನು ಬಲರಾಮನಿಗೆ ವಿವಾಹ ಮಾಡಿಕೊಡು'' ಎಂದನು. ಅದರಂತೆ ಭೂಲೋಕಕ್ಕೆ ಹಿಂತಿರುಗಿದ ರೇವತನು ರೇವತಿಯನ್ನು ಬಲರಾಮನಿಗೆ ಕೊಟ್ಟು ಮದುವೆ ನೆರವೇರಿಸಿದನು. ತಾನು ತಪಸ್ಸಿಗೆ ಹೊರಟು ಹೋದನು.

ಭೀಷ್ಮಕ ವಿದರ್ಭಾಧಿಪ. ಅವನಿಗೆ ಐವರು ಗಂಡು ಮಕ್ಕಳು. ರುಕ್ಮಿ, ರುಕ್ಮರಥ, ರುಕ್ಮಬಾಹು, ರುಕ್ಮಕೇಶ, ರುಕ್ಮಮಾಲಿ ಎಂದು ಅವರ ಹೆಸರು. ಒಬ್ಬಳು ಹೆಣ್ಣುಮಗಳೂ ಇದ್ದಳು. ಅವಳು ರುಕ್ಮಿಣಿ. ರುಕ್ಮಿಣಿ ಬೇರೆ ಯಾರೂ ಅಲ್ಲ, ಸಾಕ್ಷಾತ್ ಲಕ್ಷ್ಮಿಯ ಅವತಾರವೇ. ಭೀಷ್ಮಕನ ಆಸ್ಥಾನಕ್ಕೆ ಬರುತ್ತಿದ್ದ ಗಾಯಕರೆಲ್ಲ ಶ್ರೀಕೃಷ್ಣನ ರೂಪ, ಪರಾಕ್ರಮ, ಗುಣ ಐಶ್ವರ್ಯಗಳನ್ನು ಹೊಗಳುತ್ತಿದ್ದುದನ್ನು ಕೇಳಿ ರುಕ್ಮಿಣಿಗೆ ಅವನೇ ತನಗೆ ತಕ್ಕಪತಿಯೆಂದು ಅನಿಸಿತು. ಅನಿಸಿಕೆ ಕ್ರಮೇಣ ಅನುರಾಗಕ್ಕೆ ತಿರುಗಿತು. ಇತ್ತ ಕೃಷ್ಣನೂ ರುಕ್ಮಿಣಿಯ ಪ್ರಶಂಸೆಯನ್ನು ಕೇಳಿದ್ದನು. ಬುದ್ಧಿ, ಲಕ್ಷಣ, ಔದಾರ್ಯ, ರೂಪ, ಶೀಲಗಳಲ್ಲಿ ರುಕ್ಮಿಣಿಯು ತನಗೆ ಅನುರೂಪಳೆಂದು ತಿಳಿದ ಶ್ರೀಕೃಷ್ಣನು ಅವಳಲ್ಲಿ ಅನುರಕ್ತನಾದನು. ರುಕ್ಮಿಣೀ, ಕೃಷ್ಣರ ಪರಸ್ಪರ ಭಾವವನ್ನು ಬಲ್ಲ ಬಂಧುಗಳೆಲ್ಲ ಅವರ ವಿವಾಹವನ್ನು ಇಷ್ಟಪಟ್ಟರು. ಆದರೆ ರುಕ್ಮಿಗೆ ಯಾಕೋ ಕೃಷ್ಣನ ಬಗೆಗೆ ಅಸೂಯೆ, ದ್ವೇಷಗಳಿದ್ದವು. ಆದುದರಿಂದ ಅವನು ತಂಗಿಯಾದ ರುಕ್ಮಿಣಿಯನ್ನು ಶ್ರೀಕೃಷ್ಣನಿಗೆ ಕೊಡಲು ಒಪ್ಪಲಿಲ್ಲ. ಅವನಿಗೆ ಚೇದಿಯ ಅರಸನಾದ ದಮಘೋಷನ ಮಗ ಶಿಶುಪಾಲನು ಪ್ರಿಯ ಮಿತ್ರನಾಗಿದ್ದನು. ಈ ಶಿಶುಪಾಲನಿಗೇ ರುಕ್ಮಿಣಿಯನ್ನು ಕೊಟ್ಟು ವಿವಾಹ ಮಾಡಲು ಅವನು ನಿರ್ಧರಿಸಿದ್ದನು. ಈ ಶಿಶುಪಾಲನು ಕೃಷ್ಣನ ಸೋದರತ್ತೆಯಾದ ಶ್ರುತಶ್ರವೆಯ ಮಗನೇ. ಆದರೆ ಅವನೂ ಕೃಷ್ಣ ದ್ವೇಷಿಯೇ ಆಗಿದ್ದನು. ರುಕ್ಮಿಣಿಗೆ ತನ್ನ ಅಣ್ಣ ರುಕ್ಮಿಯ ನಿರ್ಧಾರದಿಂದ ವ್ಯಥೆಯಾಗಿತ್ತು. ಅವಳು ಗುಟ್ಟಾಗಿ ಒಬ್ಬ ವಿಶ್ವಾಸಪಾತ್ರ ಬ್ರಾಹ್ಮಣನ ಮೂಲಕ ದ್ವಾರಕೆಯ ಶ್ರೀಕೃಷ್ಣನಿಗೆ ತನ್ನ ಪ್ರೇಮ ಸಂದೇಶವನ್ನು ಕಳುಹಿಸಿದಳು.

ಬ್ರಾಹ್ಮಣನು ವೇಗವಾಗಿ ಪ್ರಯಾಣ ಮಾಡಿ ದ್ವಾರಕೆಯನ್ನು ತಲುಪಿದನು. ಅಲ್ಲಿ ಸ್ವರ್ಣಪೀಠದ ಮೇಲೆ ವಿರಾಜಮಾನನಾಗಿದ್ದ ಶ್ರೀಕೃಷ್ಣನನ್ನು ಕಂಡನು. ಬ್ರಾಹ್ಮಣನನ್ನು ನೋಡುತ್ತಲೆ ಭಗವಂತನು ತನ್ನ ಆಸನದಿಂದಿಳಿದು ಅವನನ್ನು ಯೋಗ್ಯವಾದ ಆಸನದಲ್ಲಿ ಕುಳ್ಳಿರಿಸಿ ಯಥಾವಿಧಿ ಸತ್ಕರಿಸಿದನು. ಕುಶಲಪ್ರಶ್ನೆಗಳಾದ ಮೇಲೆ ಬ್ರಾಹ್ಮಣನು ರುಕ್ಮಿಣಿಯ ಸಂದೇಶವನ್ನು ಪ್ರಸ್ತುತಪಡಿಸಿದನು. ರುಕ್ಮಿಣಿಯು ಶ್ರೀಕೃಷ್ಣನನ್ನು ಬಹುವಾಗಿ ಪ್ರೀತಿಸುತ್ತಿರುವುದಾಗಿಯೂ, ಅವಳನ್ನು ಅವಳ ಅಣ್ಣ ರುಕ್ಮಿಯು ಚೈದ್ಯನಾದ ಶಿಶುಪಾಲನಿಗೆ ಕೊಡಲು ಅಣಿಮಾಡುತ್ತಿರುವುದಾಗಿಯೂ, ಆ ಮದುವೆಗೆ ಒಂದು ದಿನ ಮುಂಚಿತವಾಗಿ ವಿದರ್ಭಕ್ಕೆ ಬಂದು ಚೇದಿಯ ಮತ್ತು ಮಗಧದ ಸೇನೆಗಳನ್ನು ಧ್ವಂಸ ಮಾಡಿ ವೀರ್ಯಶುಲ್ಕಳಾದ ತನ್ನನ್ನು ಅಪಹರಿಸಿ ಕೊಂಡು ಹೋಗಿ ವಿವಾಹವಾಗಬೇಕಾಗಿಯೂ ಪ್ರಾರ್ಥಿಸಿ ಕೊಂಡಿದ್ದಳು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

ಶಂಖಾದೌ ಚಂದ್ರದೈವತ್ಯಂ ಕುಕ್ಷೌ ವರುಣದೇವತಾ ।
ಪೃಷ್ಠೇ ಪ್ರಜಾಪತಿಶ್ಚೈವ ಚಾಗ್ರೇ ಗಂಗಾಸರಸ್ವತೀ ॥

ಅಂದರೆ ಶಂಖದ ಬುಡದಲ್ಲಿ ಚಂದ್ರ, ಮಧ್ಯದಲ್ಲಿ ವರುಣ, ಹಿಂಭಾಗದಲ್ಲಿ ಪ್ರಜಾಪತಿ, ತುದಿಯಲ್ಲಿ ಗಂಗಾಸರಸ್ವತಿಯರು ಇದ್ದಾರೆಂದು ಭಾವಿಸಬೇಕು. (ಎಲ್ಲಾ ದೇವತೆಗಳಿಂದಲೂ ನಮಸ್ಕರಿಸಲ್ಪಡುವ ಶಂಖಕ್ಕೆ ನಮಸ್ಕಾರ)

**ಪುಸ್ತಕ ಪರಿಚಯ :**

**''ಆಹ್ನಿಕ ದರ್ಪಣಂ''**

*ಸಂಗ್ರಹಿಸಿದವರು :* ಬೆಳ್ಳೆ ಭವಾನಿ ರಾವ್ ಐ.ಕೆ.ಕುಮಾರಸ್ವಾಮಿ ಮತ್ತು ಸಹೋದರರು, ಸಹೋದರಿಯರ ಕೊಡುಗೆ

ಪರಿಷ್ಕೃತ ಆವೃತ್ತಿ : 2010

ಮುನ್ನುಡಿ (ಪರಿಷ್ಕೃತ ಆವೃತ್ತಿ 2010) : ''ಈ ಆವೃತ್ತಿಯು ನಮ್ಮ ಪೂಜ್ಯ ಮಾತಾಪಿತೃಗಳಾದ ದಿವಂಗತ ಡಾ। ಐ.ಕೆ. ಶಿವರಾಮ್‌ರಾವ್ (1914-1998) ಮತ್ತು ಶ್ರೀಮತಿ ಐ.ಕೆ.ಉಮಾದೇವಿ (1922-2008) ಯವರ ನೆನಪಿನಲ್ಲಿ ಮುದ್ರಿತವಾಗಿದೆ.

ಚಿಕ್ಕವಯಸ್ಸಿನಿಂದಲೂ ನಮಗೆ ಮಾರ್ಗದರ್ಶನ ನೀಡಿ ಹಾಗೂ ನೆರವು ನೀಡಿರುವ ನಮ್ಮ ಚಿಕ್ಕಪ್ಪನವರಾದ ದಿ। ಐ.ಕೃಷ್ಣರಾವ್ (1922-2010)ರವರಿಗೆ ಮತ್ತು ಶ್ರೀ ಐ.ಭುಜಂಗರಾವ್‌ರವರಿಗೆ ನಾವು ಆಭಾರಿಯಾಗಿದ್ದೇವೆ''- ಐ.ಕೆ.ಕುಮಾರಸ್ವಾಮಿ ಮತ್ತು ಸಹೋದರರು, ಸಹೋದರಿಯರು.

ಪ್ರಸ್ತಾವನೆ (ಮೊದಲನೇ ಆವೃತ್ತಿಯಿಂದ): ''ಅಹರಹಸ್ಸನ್ಧ್ಯಾಮುಪಾಸೀತ'' ಎಂಬ ವೇದವಾಕ್ಯದಂತೆ ಬ್ರಾಹ್ಮಣನು ಪ್ರತಿದಿವಸವೂ ಸಂಧ್ಯೋಪಾಸನೆಯನ್ನು ಮಾಡಬೇಕು. ಸಂಧ್ಯೋಪಾಸನೆಯ ವಿಧಿಗಳು ಬೇರೆ ಬೇರೆ ಶಾಖಾನುಯಾಯಿಗಳಿಗೆ ಬೇರೆ ಬೇರೆ ವಿಧಗಳಿವೆ. ನಾವು ಋಗ್ವೇದದ ಶಾಕಲ ಶಾಖಾನುಯಾಯಿಗಳಾಗಿ ಅಶ್ವಲಾಯನ ಸೂತ್ರವನ್ನು ಅನುಸರಿಸುವುದರಿಂದ ಅದಕ್ಕನುಸಾರವಾಗಿ ಸಂಧ್ಯೋಪಾಸನೆಯನ್ನು ಆಚರಿಸಬೇಕು.

ಈಗಿನ ಕಾಲಧರ್ಮಕ್ಕನುಸಾರವಾಗಿ ತುರ್ತು ಪರಿಸ್ಥಿತಿಯಲ್ಲಿ ಸಂಕ್ಷೇಪವಾಗಿ ಮಾಡಬಹುದು. ಸಂಕ್ಷೇಪ ವಿಧಿಯಲ್ಲಿ ಪ್ರೋಕ್ಷಣ, ಆಚಮನ, ಪ್ರಾಣಾಯಾಮ, ಸಂಕಲ್ಪ, ಮಾರ್ಜನ, ಮಂತ್ರಾಚಮನ. ಅರ್ಘ್ಯಪ್ರದಾನ, ಗುರುಗಣಪತಿ ಭೂ ಪ್ರಾರ್ಥನ, ಆಸನ ಶುದ್ಧಿ, ಪ್ರಾಣಾಯಾಮ, ಸಂಕಲ್ಪ, ಕರನ್ಯಾಸ, ಧ್ಯಾನ, ಗಾಯತ್ರೀ ಜಪ, ದಿಗ್ಬಂಧನೆಯಲ್ಲಿ ''ಇಂದ್ರಾಯ ನಮಃ... ಸಂಧ್ಯಾಭಿರಕ್ಷತು'' ಎಂಬಲ್ಲಿವರೆಗೆ, ಅಭಿವಂದನ, ಅಷ್ಟಾಕ್ಷರೀ, ಪಂಚಾಕ್ಷರೀ, ಇಷ್ಟದೇವತಾ ಜಪ ಮತ್ತು ಬ್ರಹ್ಮಾರ್ಪಣ ಇವುಗಳನ್ನು ಮಾತ್ರ ಮಾಡಬಹುದು. ಇಷ್ಟನ್ನು ಮಾಡಲೂ ಅವಕಾಶ ಇಲ್ಲದಿದ್ದಾಗ ಆಚಮನ, ಪ್ರಾಣಾಯಾಮ, ಸಂಕಲ್ಪ, ಮಂತ್ರಾಚಮನ, ಅರ್ಘ್ಯಪ್ರದಾನ, ಕರನ್ಯಾಸ, ಅಂಗನ್ಯಾಸ, ಧ್ಯಾನ, ಗಾಯತ್ರಿ ಜಪ ಮತ್ತು ಬ್ರಹ್ಮಾರ್ಪಣ ಇಷ್ಟನ್ನು ಮಾಡಲೇಬೇಕು. ರಜಾ ದಿನಗಳಲ್ಲಿ ಅಥವಾ ಸಮಯವಿರುವಾಗ ಸಾವಕಾಶವಾಗಿ ಸಂಪೂರ್ಣ ಸಂಧ್ಯಾವಂದನೆಯನ್ನು ಪ್ರತ್ಯೇಕವಾಗಿ ಮಾಡುವ ಅಭ್ಯಾಸವನ್ನಿಟ್ಟುಕೊಳ್ಳುವುದು ಉತ್ತಮ. ಈಗಿನ ಕಾಲದಲ್ಲಿ ಮಧ್ಯಾಹ್ನ ಸಂಧ್ಯಾವಂದನೆಯನ್ನು ಪ್ರತ್ಯೇಕವಾಗಿ ಮಾಡುವ ಕ್ರಮವನ್ನಿಟ್ಟುಕೊಳ್ಳದವರು ಸಂಕಲ್ಪದಲ್ಲಿ ''ಪ್ರಾತರ್ಮಾಧ್ಯಾಹ್ನಿಕ ಸಂಧ್ಯಾಮುಪಾಸಿಷ್ಯೇ'' ಎಂದು ಹೇಳಿ ಪ್ರಾತಃ ಸಂಧ್ಯಾವಂದನೆ ಮಾಡುವಾಗಲೇ ಮಧ್ಯಾಹ್ನ ಸಂಧ್ಯೆಯ ಮಂತ್ರಗಳನ್ನೂ ಸೇರಿಸಿಕೊಳ್ಳಬೇಕು''- ಎನ್.ವಿ.ಉಪಾಧ್ಯಾಯ

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಲೀಕೃಷ್ಣ ರಾವ್ ಉಡುಪಿ, ಪಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ.ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಎಂ.ಆರ್. ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್.

## ಅಭಿವಂದನೆ



**ಚಿ॥ ಆದರ್ಶಕುಮಾರ ಚಿ॥ ಸೌ॥ ರಶ್ಮಿ**

ತಾ.24-04-2011ನೇ ಆದಿತ್ಯವಾರ ಕರ್ವಾಲು ಅನಂತಪಟ್ಟಾಭಿ ರಾವ್ ಮತ್ತು ಶ್ರೀಮತಿ ಪ್ರಸನ್ನಕುಮಾರಿಯವರ ಪುತ್ರ ಆದರ್ಶಕುಮಾರನ ವಿವಾಹವು ಇನ್ನಾ ಕಲ್ಲಟ್ಟ ಶೇಷಾದ್ರಿರಾವ್ ಮತ್ತು ಶ್ರೀಮತಿ ಜಲಜಾಕ್ಷಿಯವರ ಪುತ್ರಿ ಕು॥ ರಶ್ಮಿಯೊಂದಿಗೆ ಇನ್ನಾ ಮುದ್ದಾಣು ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ನೆರವೇರಿತು.

ತಾ.25-4-2011ರಂದು ನೂತನ ದಂಪತಿಗಳ ಆರತಕ್ಷತೆಯು ಕರ್ವಾಲು ಶ್ರೀ ಮಹಾವಿಷ್ಣುಮೂರ್ತಿ ದೇವರ ಸನ್ನಿಧಿಯಲ್ಲಿ ಸತ್ಯನಾರಾಯಣ ಪೂಜೆಯೊಂದಿಗೆ ಜರಗಿತು. ಅಂದು ಸಂಜೆ ಪಡುಬಿದ್ರಿ ಗಣಪತಿ ಪ್ರೌಢಶಾಲಾ ಹಳೆ ವಿದ್ಯಾರ್ಥಿ ಗಳು ಅರ್ಪಿಸಿದ ನೃತ್ಯಾಂಜಲಿ, ಸಂಗೀತ ಸುಧಾ ಹಾಗೂ ತುಳುನಾಟಕ 'ಬಾಜೆಲ್ ಬಾಬು' ಪ್ರೇಕ್ಷಕರ ಮನಸೂರೆಗೊಂಡಿತು. ಸಭಾ ಕಾರ್ಯಕ್ರಮದಲ್ಲಿ ನಮ್ಮ ಸಮಾಜ ಬಾಂಧವ, ನಾಟಕಗಾರ, ನಟ, ಶ್ರೀ ಆದಿಶಂಕರಾಚಾರ್ಯ ನಾಟಕವನ್ನು ಬರೆದು ನಿರ್ದೇಶಿಸಿ ಪ್ರಸ್ತುತಪಡಿಸಿದ ಶ್ರೀಯುತ ಬೈಲೂರು ಬಾಲಚಂದ್ರರಾವ್‌ರವರನ್ನು ಸನ್ಮಾನಿಸಲಾಯಿತು. ಜೊತೆಗೆ ಉಡುಪಿ ಮತ್ತು ಪರಿಸರದ ಸಂಗೀತ ಪ್ರೇಮಿಗಳಿಗೆ ಆಪ್ತರಾದ ಹಾರ್ಮೋನಿಯಂ ಮತ್ತು ಕೀಬೋರ್ಡ್‌ಗಳಲ್ಲಿ ಜನಪ್ರಿಯತೆ ಪಡೆದ ಬಿ. ಪ್ರಕಾಶ್‌ರಾವ್ ಹಾಗೂ 'ಬಾಜೆಲ್ ಬಾಬು' ನಾಟಕದ ಎಲ್ಲಾ ಕಲಾವಿದರನ್ನು ಗೌರವಿಸಲಾಯಿತು. ಸಭಾಕಾರ್ಯ ಕ್ರಮದಲ್ಲಿ ಬೈಲೂರು ಬಾಲಚಂದ್ರರಾವ್, ಕರ್ವಾಲು ಕ್ಷೇತ್ರದ ಧರ್ಮದರ್ಶಿ ಕೆ. ಸೋಮಶೇಖರ ರಾವ್ ಮತ್ತು ಗಣಪತಿ ಪ್ರೌಢಶಾಲಾ ಹಳೆವಿದ್ಯಾರ್ಥಿ ಸಂಘದ ಅಧ್ಯಕ್ಷರು ಅತಿಥಿಗಳಾಗಿ ಭಾಗವಹಿಸಿದ್ದರು. ಅನಂತಪಟ್ಟಾಭಿರಾವ್ ದಂಪತಿಗಳು ಹಾಗೂ ಶೇಷಾದ್ರಿರಾವ್ ದಂಪತಿಗಳು ವೇದಿಕೆಯಲ್ಲಿದ್ದು ಅತಿಥಿಗಳನ್ನು ಮತ್ತು ಕಲಾವಿದರನ್ನು ಗೌರವಿಸಿದರು.

**ವಿವಾಹಕ್ಕೆ ಆಗಮಿಸಿದ ಬಂಧುಮಿತ್ರರಿಗೆ, ಹಿತೈಷಿಗಳಿಗೆ, ಕಲಾವಿದರಿಗೆ, ಕಲಾರಸಿಕರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಶ್ರೀಮತಿ ಪ್ರಸನ್ನ ಕುಮಾರಿ ಹಾಗೂ ಶ್ರೀ ಅನಂತಪಟ್ಟಾಭಿರಾವ್‌ರವರ ಅನಂತಾನಂತ ಕೃತಜ್ಞತೆಗಳು.**

## ವಿದೇಶ ಪ್ರಯಾಣ







ಅಂಬಲಪಾಡಿಯ ಶ್ರೀ ವೈ.ಮೋಹನ್ ರಾವ್ ಮತ್ತು ಶ್ರೀಮತಿ ಉಷಾ ಇವರು ತಮ್ಮ ಸೊಸೆ ಶ್ರೀಮತಿ ಪ್ರಿಯಾ, ನಾದಿನಿ ಶ್ರೀಮತಿ ರಮಾ ಟಿ.ಸಿ.ರಾವ್ ಮತ್ತು ಭಾವ ಶ್ರೀ ಬಿ. ಜಯರಾಮ ರಾವ್ ಇವರೊಂದಿಗೆ ತಾ.10-05-2011ರಿಂದ 3 ವಾರಗಳ ಕಾಲ ಸಿಂಗಾಪುರ, ಇಂಡೋನೇಶ್ಯ, ಮಲೇಶ್ಯ ದೇಶಗಳ ಪ್ರವಾಸ ಕೈಗೊಳ್ಳಲಿರುವರು.

ಶ್ರೀ ವೈ. ಮೋಹನರಾವ್ ದಂಪತಿಗಳು ಸಿಂಗಾಪುರದಲ್ಲಿ ಉದ್ಯೋಗದಲ್ಲಿರುವ ತಮ್ಮ ಮಗ ವೈ.ದೀಪಕ್ ರಾವ್ ಅವರನ್ನು ಕೂಡಿಕೊಳ್ಳಲಿರುವರು.

ಶ್ರೀ ಶಾರದಾ ಪತ್ರಿಕೆಯ ಪ್ರಧಾನ ಸಂಪಾದಕರಾಗಿರುವ ಶ್ರೀ ವೈ. ಮೋಹನರಾವ್ ಮತ್ತು ಅವರ ಕುಟುಂಬದ ಸದಸ್ಯರ ಪ್ರಯಾಣವು ಸುಖಕರವಾಗಲೆಂದು ಶ್ರೀಶಾರದಾ ಬಳಗದ ಹಾರೈಕೆ.

**ಕವನ** **ಹೆಂಡತಿಯೊಬ್ಬಳು ನೌಕರಿಲಿದ್ದರೆ.....** ಸಂಗ್ರಹ : M.N.S.

ಹೆಂಡತಿಯೊಬ್ಬಳು ನೌಕರಿಲಿದ್ದರೆ ನನಗದೆ ಕೋಟಿ ರೂಪಾಯಿ
ಹೆಂಡತಿ ನೌಕರಿಗ್ಹೊರಟಳು ಎಂದರೆ ನಾನೇ ಅವಳ ಸಿಪಾಯಿ.

ಹೆಂಡತಿ ಏಳುವ ಮುನ್ನವೆ ಮಾಡುವೆ ನಾನೇ ಬಿಸಿ ಬಿಸಿ ಚಹಾವ
ಚಹಾವನು ಕುಡಿಯುತ ಹೆಂಡತಿ ಹೇಳುವಳು ಚಹಾ ಚೆನ್ನಾಗಿದೆ ವಹವ್ವಾ

ಅಡುಗೆಯಲೇನಿರಬೇಕೆಂದಾಕೆಯು ಹೇಳ್ವಳು ನನಗೆ ದಿನವೂ
ಬಿಸಿಬಿಸಿ ಅಡುಗೆಯ ಮಾಡುತ ಡಬ್ಬಿಯ ಕಟ್ಟುವೆ ನಾ ದಿನದಿನವೂ

ಕಾರನು ಒರೆಸಿ ಬಾಗಿಲ ತೆರೆದು ಕಾಯ್ವೆನು ನಾ ಮನೆಹೊರಗೆ
ಬಿಂಕದಿ ಬಂದು ಕಾರಲಿ ಕೂರ್ವಳು ಚಿಮ್ಮುತ ಸೀರೆಯ ನಿರಿಗೆ

ರಾತ್ರಿಯ ಅಡುಗೆಯ ಮಾಡುತ ನೋಡುವೆ ಮಕ್ಕಳ ಹೋಂವರ್ಕ್ ನಾನು
ಸೋಫಾ ಮೇಲೆ ಮೈಯನು ಚೆಲ್ಲಿ ಕೈಯಲಿ ಹಿಡಿವಳು ಟೆಲಿಫೋನು

ತಟ್ಟೆಯ ಹಾಕಿ ಅನ್ನವ ಬಡಿಸಿ ಊಟಕೆ ಕರೆವೆನು ನಾನು
ಸಾರನು ಮೂಸಿ ಕೇಳುವಳೆನ್ನನು-'ಮಾಡುವ ರೀತಿ ಇದೇನು'

ಹಾಸಿಗೆ ಹಾಸಿ ಹೊದಿಕೆಯ ಎಳೆದು ಮಲಗುವ ಪರಿ ಅದೇನು!
ಒಂದೇ ಕ್ಷಣದಲಿ ಗೊರಕೆಯ ತಾನಕೆ ಕಣ್ ಕಣ್ ಬಿಡುವೆನು ನಾನು

ಹಾಸ್ಯಕ್ಕಾಗಿ ಹೇಳಿದುದೆಲ್ಲಾ ಆಗದು ಎಂದಿಗೂ ಸತ್ಯ
ಎಲ್ಲಾ ನಾನೇ ಮಾಡುವೆನೆಂಬುದು ಆಗಿದೆ ಕೇವಲ ಮಿಥ್ಯ

ಒಳಗೂ ಹೊರಗೂ ದುಡಿವಳು ಆಕೆ ಮನದಲಿ ತುಂಬಿದೆ ಪ್ರೀತಿ
ತನ್ನಯ ಜೀವನ ಸವೆಸುವಳಾಕೆ ಗಂಧದ ಕೊರಡಿನ ರೀತಿ.

## ವೈವಾಹಿಕ ಜೀವನದ ನಲವತ್ತೈದನೇ ವರ್ಷಾಚರಣೆ

**ಆಮಂತ್ರಣ**





**ಕೆ. ವೆಂಕಟರಮಣ ರಾವ್ ಮತ್ತು ಶ್ರೀಮತಿ ಶಾಂತಾ ವಿ. ರಾವ್**

ಶಾಂತಿ ನಿವಾಸ, ಕುಡಾಲ್, ಮಹಾರಾಷ್ಟ್ರ. ದೂರವಾಣಿ : 02362-221220

ಪ್ರಿಯರೇ,

ನಮ್ಮ ಹಿರಿಯರಾದ ಶ್ರೀ ಕೆ.ವಿ.ರಾವ್‌ರವರ 70ನೇ ಜನ್ಮದಿನೋತ್ಸವ ಹಾಗೂ ಶ್ರೀ ಕೆ.ವಿ.ರಾವ್ ಮತ್ತು ಶ್ರೀಮತಿ ಶಾಂತಾ ವಿ.ರಾವ್ ದಂಪತಿಗಳ ವೈವಾಹಿಕ ಜೀವನದ 45ನೇ ವರ್ಷಾಚರಣೆಯ ಶುಭ ಸಂದರ್ಭದಲ್ಲಿ ತಾ.18-05-2011ರ ಬುಧವಾರ ಬೆಳಿಗ್ಗೆ 10-00 ಗಂಟೆಗೆ ಶ್ರೀ ಶಾಂತಿಹೋಮಗಳೊಂದಿಗೆ ಶ್ರೀ ಸತ್ಯನಾರಾಯಣ ಪೂಜಾ ಕಾರ್ಯಕ್ರಮವನ್ನು ಕುಡಾಲಿನ ಸ್ವಗೃಹದಲ್ಲಿ ನೆರವೇರಿಸಲಾಗುವುದು.

ಆತ್ಮೀಯ ಬಂಧುಗಳು ಆಗಮಿಸಿ, ಸಮಾರಂಭದಲ್ಲಿ ಪಾಲ್ಗೊಂಡು ಶ್ರೀದೇವರ ಪ್ರಸಾದ ಸ್ವೀಕರಿಸಬೇಕೆಂದು ಅಪೇಕ್ಷಿಸುವ,

ತಮ್ಮ ಆಗಮನಾಭಿಲಾಷಿಗಳು,

**ಶ್ರೀಮತಿ ಪ್ರಜ್ವಲಾ ಮತ್ತು ಶ್ರೀ ಕೆ. ಉಮೇಶ್ ರಾವ್ ಕುಡಾಲ್** (ಸಹೋದರ)
**ಶ್ರೀಮತಿ ಆಶಾ ಮತ್ತು ಶ್ರೀ ಸುಭಾಷ್ ರಾವ್, ಇಸ್ಲಾಂಪುರ** (ಮಗಳು, ಅಳಿಯ)
**ಶ್ರೀಮತಿ ಅನಿತಾ ಮುಂಬೈ** (ಮಗಳು), **ಮಾ॥ ಕರಣ್, ಮುಂಬೈ** (ಪೌತ್ರ)
**ಶ್ರೀ ವಿದ್ಯಾಧರ್ ಮತ್ತು ಶ್ರೀಮತಿ ಸಂಪದಾ, ಕೊಲ್ಹಾಪುರ** (ಅಳಿಯ, ಮಗಳು)
**ಶ್ರೀ ವಿಶ್ವನಾಥ್ ಮತ್ತು ಶ್ರೀಮತಿ ಅಂಜನಾ, ಕುಡಾಲ್** (ಅಳಿಯ, ಮಗಳು)
**ಹಾಗೂ ಮೊಮ್ಮಕ್ಕಳು**

# ತ್ಯಾಗ

– ಸಾಂತೂರು ಸದಾಶಿವ ರಾವ್, ನಿವೃತ್ತ ಇತಿಹಾಸ ಉಪನ್ಯಾಸಕ
ವೇದಾಧ್ಯಾಯಿ, ಪ್ರವಚನಕಾರ, ಯಕ್ಷಗಾನ ಕಲಾವಿದ

ನಕರ್ಮಣಾ ನಪುಜಯಾ ದ್ಯನೇನ ತ್ಯಾಗೇನೈಕೇ ಅಮೃತತ್ವ ಮಾನುಶಂ'' ಇದು ಭಾರತದ ಉದ್ದಗಲಕ್ಕೂ ಪೂಜಾಂತ್ಯದಲ್ಲಿ ಮಂತ್ರಪುಷ್ಪವೆಂದು ಹೇಳಲ್ಪಡುವ ಶುಭಕರ ಸೂಕ್ತದ ಭಾಗ. ಮಂತ್ರಗಳ ಜಪ, ಹೋಮ, ಪಾರಾಯಣಾದಿಗಳು ಅತ್ಯಂತ ಶ್ರೇಷ್ಠವಾದ ಭಗವತ್ಪ್ರೀತಿಗೆ ಕಾರಣವಾಗುವ ಸಾಧನೆಗಳು.

ಆದರೆ ಮಂತ್ರ ಶಬ್ದಕ್ಕೆ ''ಮನನಾತ್ ತ್ರಾಯತೆ ಇತಿ ಮಂತ್ರ'' ಎಂಬ ವ್ಯುತ್ಪತ್ತಿ. ಆದುದರಿಂದ ಅರ್ಥಾನುಸಂಧಾನ ಪೂರ್ವಕ ಮನನ ಮಾಡಿದರೆ ಮುಂದೆ ಅದು ನಿಧಿಧ್ಯಾಸನ ಅಂದರೆ ಆಚರಣೆಯಲ್ಲಿ ಕಂಡು ಬಂದಾಗ ಅವನನ್ನು ಎಲ್ಲಾ ಅಪಾಯಗಳಿಂದ ರಕ್ಷಿಸುತ್ತದೆ. ಅವನ ಕಾಮನೆಗಳು ಕೈಗೂಡುತ್ತವೆ. ಅನಿಷ್ಟ ನಿವೃತ್ತಿ ಇಷ್ಟ ಪ್ರಾಪ್ತಿಯಾಗುತ್ತದೆ.

ಈ ಮಂತ್ರವು ಅಮೃತತ್ವ ಪ್ರಾಪ್ತಿಯ ಮಾರ್ಗವನ್ನು ತೋರಿಸುತ್ತದೆ. ಇದು ಪೂರ್ಣತೆಗೆ, ಬಂಧನ ರಹಿತ ಮೋಕ್ಷಕ್ಕೆ ಕೊಂಡೊಯ್ಯುವ ಪಥ.

ಇಲ್ಲಿ ಇತ್ಯಾತ್ಮಕವಾದ ಭಾಗ ''ತ್ಯಾಗೇನೈಕೇ ಅಮೃತತ್ವ ಮಾನುಶುನೇತಿ' ಅಂದರೆ ಇದರಿಂದ ಅಲ್ಲ ಎಂದು ಹೇಳುವ ಭಾಗ. 'ನಕರ್ಮಣಾ ನಪ್ರಜಯಾ ನಧನೇನ ಅಮೃತ್ವ ಮಾನುಶು''. ಈ ಎರಡೂ ಭಾಗಗಳು ಸೇರಿದಾಗ ಪೂರ್ಣತೆ ಲಭಿಸುತ್ತದೆ.

ತ್ಯಾಗ ಎಂದರೆ ಬಿಡುವುದು. ಆಶ್ರಮ ವ್ಯವಸ್ಥೆಯಲ್ಲಿ ''ಬ್ರಹ್ಮಚರ್ಯ'' ಗೃಹಸ್ಥ ಈ ಸಂದರ್ಭಗಳಲ್ಲಿ ಇದ್ದ ಕರ್ಮ, ಪ್ರಜೆ, ಧನಗಳನ್ನು ಬಿಟ್ಟು ವಾನಪ್ರಸ್ಥಕ್ಕೆ ಹೋಗಿ ಮುಂದೆ ಪೂರ್ಣ ತ್ಯಾಗ ಅಂದರೆ ಸಮ್ಯಕ್‌ನ್ಯಾಸ ಅಥವಾ ಸನ್ಯಾಸ ಸ್ವೀಕರಿಸುವುದು ಒಂದು ಕ್ರಮ.

ಇನ್ನೊಂದು ರೀತಿ ಭಗವದ್ಗೀತೆಯಲ್ಲಿ ಉಪದಿಷ್ಟವಾದ ರಾಮಕೃಷ್ಣಪರಮಹಂಸರ ಅನುಯಾಯಿಗಳೂ ಇತರ ಸಮಾಜ ಹಿತೈಷಿ ಪಂಥದವರೂ ಉಪದೇಶಿಸುವ ಆಸಕ್ತಿ ರಹಿತವಾಗಿ ಮನೆಯಲ್ಲೇ ಇದ್ದು, ಕರ್ತವ್ಯ ಮಾಡುತ್ತಾ ಇರುವುದು. ಇಲ್ಲಿ ಫಲಾಪೇಕ್ಷೆ ಇಲ್ಲ, ನಿಸ್ಪೃಹನಾಗಿ ಲಾಭ ನಷ್ಟಗಳಲ್ಲಿ ಸಮಭಾವದಿಂದ ಇದ್ದು, ಲೋಕಕ್ಕೆ ಆದರ್ಶವಾಗಿ ಬಾಳುವುದು.

''ನಿಸ್ಪೃಹಸ್ಯತೃಣಂ ಜಗತ್'' ಜಗತ್ತು ಎಂದರೆ ''ಗಚ್ಛತಿ ಇತಿ'' ಈಗ ಇರುವುದು ಮುಂದೆ ಇರಲಾರದು. ಮೊದಲು ಇರಲಿಲ್ಲ, ಹಾಗಾಗಿ ಲೋಕ ಜೀವನವು ತ್ಯಾಗ ಮಾಡುವ ಸನ್ಯಾಸದಿಂದ ಅಥವಾ ಆಸಕ್ತಿ ರಹಿತನಾಗಿ ನಿಸ್ಪೃಹನಾಗಿ ಬಾಳುವ ಮೂಲಕ ಅಮೃತತ್ವ ಪ್ರಾಪ್ತಿಗೆ ಕಾರಣವಾಗುತ್ತದೆ. ಅಮೃತತ್ವ ಎಂದರೆ ಮೃತವಾಗದ ಸ್ಥಿತಿ ಬದುಕಿರುವಾಗ ಅಕಾಲ ಮೃತ್ಯು ಪುಚಾನಷ್ಟ, ಧನದ ಅಪವ್ಯಯ ಇತ್ಯಾದಿಗಳಿಲ್ಲ, ದೇಹ ತ್ಯಾಗದ ಬಳಿಕ ಮೋಕ್ಷ ಅಂದರೆ ಪುನಃ ಹುಟ್ಟಿ ಬರಬೇಕಾದ ಅಗತ್ಯ ವಿರುವುದಿಲ್ಲ, ತ್ಯಾಗ ಮಾಡದವನು ''ಸುಖ ದುಃಖ ಜನನ ಮರಣಗಳ ಚಕ್ರದಲ್ಲಿ ತಿರುಗುತ್ತಲೇ ಇರಬೇಕಾಗುತ್ತದೆ.

ತ್ಯಾಗ ಮಾಡುವುದು ಜನಿಸಿದವನಿಗೆ ಬದುಕಬೇಕಾದರೆ ಅಗತ್ಯವಾದ ಸಹಜಕರ್ಮ, ಬುದ್ಧಿಗೆ ಗೋಚರವಾಗುವ, ತಿಳಿದು ಆಚರಿಸುವ ಕರ್ತವ್ಯ ಕರ್ಮ ಪ್ರಾರಬ್ಧಫಲವಾಗಿ ಬರುವ ಪ್ರಾಪ್ತಕರ್ಮ, ಆಸಕ್ತಿಯಿಂದ ತೊಡಗಿಸಿಕೊಳ್ಳುವ ಕರ್ಮ ಇತ್ಯಾದಿಗಳು ಇರುತ್ತದೆ.

ಪೂಜೆ ಎಂಬ ಶಬ್ದಕ್ಕೆ ಮಕ್ಕಳು, ಅಧೀನವಾಗಿರುವವರು ಎಂಬ ಸಾಮಾನ್ಯ ಅರ್ಥವನ್ನು ಮೀರಿದ ವ್ಯಾಪ್ತಿ ಇದೆ. ''ಪುಕೃಷ್ವೇನ ಜಾಯತೇ ಇತಿ ಪೂಜಾ'' ಒಬ್ಬನ ಸಾಧನೆಗಳು ಬೆಳೆಸುವ ಬೆಳೆ ಮಾಡಿದ ಕರ್ಮದ ಫಲ. ಇತ್ಯಾದಿಗಳೆಲ್ಲಾ ಈ ಶಬ್ದದ ವ್ಯಾಪ್ತಿಗೆ ಬರುತ್ತದೆ. ಅವುಗಳ ರಕ್ಷಣೆ ಪೋಷಣೆಗಳ ಹೊಣೆಗಾರಿಕೆ ಇರುತ್ತದೆ. ಅವುಗಳ ಬಗ್ಗೆ ವ್ಯಾಮೋಹ ಇರುತ್ತದೆ.

'ಧನ' ಎಂದರೆ 'ಹಣ' ಎಂಬ ಸಾಮಾನ್ಯ ಅರ್ಥಕ್ಕಿಂತ ಹೆಚ್ಚಾಗಿ ಒಬ್ಬನು ಪ್ರಯತ್ನ, ಸಾಧನೆಗಳ ಮೂಲಕ ಹೊಂದಿರುವ ಎಲ್ಲವೂ 'ಧನ' ಎಂದು ಪರಿಗಣಿಸಲ್ಪಡುತ್ತದೆ. ಆರೋಗ್ಯವಂತ ದೇಹ, ಮನೆ ಇತ್ಯಾದಿಗಳು ಕೀರ್ತಿ ಸ್ಥಾನಾದಿಗಳೆಲ್ಲಾ ಒಬ್ಬನಲ್ಲಿರುವ ಧನ.

ಈ ಮಂತ್ರವು ಈ ಮೂರು ಶಬ್ದಗಳ ಮೂಲಕ ಜಗತ್ತನ್ನು, ಜಗತ್ತಿನ ಬಂಧನವನ್ನು ಬಿಂಬಿಸುತ್ತದೆ. ಇದು ಜೀವಿಗೆ ಅನಿವಾರ್ಯವಾಗಿರುತ್ತದೆ. ಸನ್ಯಾಸಿಯೂ, ದೇಹಧಾರಣೆಗೆ ಕರ್ಮ, ಉದ್ಧಾರಕ್ಕೆ ಸಾಧನೆ, ಹಿರಿಮೆಗೆ ಕಾರಣವಾಗುವ ಜ್ಞಾನಾದಿ ಸಂಪತ್ತನ್ನು ಹೊಂದಿಯೇ ಇರುತ್ತಾನೆ.

ಹಾಗಾಗಿ ಎಲ್ಲರೂ ಕರ್ಮಗಳ ಫಲದಲ್ಲಿ ಅನಾಸಕ್ತಿ, ಪೂಜಾ ವ್ಯಾಮೋಹ ತ್ಯಾಗ, ಧನದ ದುರುಪಯೋಗ ಮಾಡದಿರುವಿಕೆಯ ಮೂಲಕ ಅಮೃತತ್ವವನ್ನು ಪಡೆಯಬಹುದು.


ಇದು ಸರಳವಾದ, ಅಸಂದಿಗ್ಧವಾದ, ಎಲ್ಲರೂ ಮುನ್ನಡೆಯಬಹುದಾದ ಮಾರ್ಗ. ಈ ಮಂತ್ರದ ಶ್ರವಣ, ಮನನ ನಿಧಿಧ್ಯಾಸನಗಳು ನಡೆದಂತೆ ಅಮೃತತ್ವ ನಮಗೆ ಹತ್ತಿರವಾಗುತ್ತದೆ. ''ಲೋಕಾಃ ಸಮಸ್ತಾ ಸುಖಿನೋ ಭವಂತು'' ಎಂಬ ಮಹದಾಶಯ ಸಾಕಾರಗೊಳ್ಳುತ್ತಾ ಬರುತ್ತದೆ. ಈ ಶುಭಕರ ಪಂಥದಲ್ಲಿ ನಾವೆಲ್ಲರೂ ಮುನ್ನಡೆಯೋಣ. ''ಶುಭಂ ಅಸ್ತು'' □

# ಪರಿಸರ ಸಂರಕ್ಷಣೆ

– ವೈ. ಮೋಹನರಾವ್

ಪರಿಸರ ಎಂದರೆ ನಮ್ಮ ಸುತ್ತಮುತ್ತ ಇರುವ ಸಂಗತಿಗಳು. ಈ ಭೂಮಿ, ಆ ಆಕಾಶ, ಇಲ್ಲಿರುವ ಮಣ್ಣು ಇತ್ಯಾದಿ. ನಾವು ನಿಂತ ನೆಲ, ಸೇವಿಸುವ ಗಾಳಿ, ಕುಡಿಯುವ ನೀರು, ಸುಡುವ ಬೆಂಕಿ, ವಾಸಿಸುವ ಮನೆ, ಬೆಳೆಸುವ ತೋಟ, ಕಟ್ಟಿದ ಬಾವಿ, ಗಿಡಮರಗಳು, ಪ್ರಾಣಿಪಕ್ಷಿಗಳು, ಕ್ರಿಮಿ ಕೀಟಗಳು, ಚಲಿಸುವ ಮೋಡಗಳು, ಬೆಳದಿಂಗಳ ಚಂದ್ರ, ಮಿನುಗುತ್ತಿರುವ ಅಪಾರ ನಕ್ಷತ್ರಗಳು, ಬೆಳಕು ಮತ್ತು ಶಕ್ತಿಗೆ ಮೂಲಾಧಾರ ಸೂರ್ಯ, ತಿನ್ನುವ ಆಹಾರಗಳು, ಉಪಯೋಗಿಸುವ ಹೂಹಾರಗಳು, ತಿನ್ನುವ ಬೀಡ, ಸೇದುವ ಬೀಡಿ ಸಿಗರೇಟುಗಳು ಈ ಎಲ್ಲವೂ ನಮ್ಮ ಒಟ್ಟು ಪರಿಸರದ ವಿವಿಧತೆಗಳು. ಆದ್ದರಿಂದ ಈ ಧರಣಿಮಂಡಲ ವಿಚಿತ್ರ ಚಿತ್ರ ಜೀವರಾಶಿಗಳ ಚಿರಚರಾಸ್ತಿಗಳ ಆಶ್ರಯ ಸ್ಥಾನವಾಗಿದೆ.

ಮಾನವ ಮತ್ತು ಪರಿಸರ–ಇವೆರಡರ ನಡುವಿನ ಸಂಬಂಧ ಹಲವು ಸಾವಿರ ವರ್ಷಗಳಷ್ಟು ಹಿಂದಿನದು. ಪುರಾತನ ಕಾಲದಿಂದಲೂ ಮೇದಿನಿಯ ಮೇಲಿರುವ ಪ್ರಾಣಿ ಪಕ್ಷಿಗಳು ಮತ್ತು ವೃಕ್ಷ ಸಂಪತ್ತು ಬುದ್ಧಿವಂತ ಮಾನವನೊಡನೆ ಸಹಜೀವನ ನಡೆಸಿಕೊಂಡು ಬಂದಿವೆ. ಅರಣ್ಯ ಮತ್ತು ವನ್ಯಪ್ರಾಣಿಗಳ ಬಗೆಗೆ ಸುಂದರ ವರ್ಣನೆಗಳನ್ನು ಪ್ರಾಚೀನ ಮಹಾಕಾವ್ಯಗಳಲ್ಲಿ ಕಾಣಬಹುದು. ವೇದಗಳಲ್ಲಿ ಪಾಣಿನಿಯ ಸೂತ್ರಗಳಲ್ಲಿ ಅರಣ್ಯಗಳ ಮಹತ್ವದ ಬಗ್ಗೆ ಪ್ರಸ್ತಾಪಗಳಿವೆಯಂತೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಆ ದಿನಗಳಲ್ಲೇ ಅರಣ್ಯ ಸಂರಕ್ಷಣೆಗೆ ಕೊಡಲಾದ ಮಹತ್ವವನ್ನು ತಿಳಿಯಬಹುದು. ಅಶೋಕನ ಕಾಲದಲ್ಲಿ ಮಾರ್ಗದ ಇಕ್ಕೆಲಗಳಲ್ಲಿ ಮರಗಳನ್ನು ನೆಡೆಸಿದುದರ ಬಗ್ಗೆಯೂ ಇತಿಹಾಸದಲ್ಲಿ ದಾಖಲೆಯಿದೆ.



ಹಿಂದಿನ ಕಾಲದಲ್ಲಿ ರಾಜರಾಣಿಯರು ವನವಿಹಾರಕ್ಕೆ ಹೋಗುವುದನ್ನು ಮತ್ತು ಕಾಡನ್ನು ನೋಡಿಕೊಳ್ಳಲು ನೇಮಿಸಲ್ಪಟ್ಟ ವನಪಾಲಕರ ಬಗ್ಗೆ ಕೇಳಿದ್ದೇವೆ. ಋಷಿಗಳ ಆಶ್ರಮ, ಅಲ್ಲಿ ಕಂಗೊಳಿಸುವ ವನವೃಕ್ಷಗಳು, ಆಟವಾಡುವ ಜಿಂಕೆ, ಮೊಲ, ಹಸುಕರುಗಳು ಮೊದಲಾದ ಪ್ರಾಣಿಗಳ ಬಗ್ಗೆ ಕೇಳಿದ್ದೇವೆ. ಪಂಚತಂತ್ರ, ಹಿತೋಪದೇಶ ಕಥೆಗಳಲ್ಲೂ ಪ್ರಾಣಿಗಳ ನಡವಳಿಕೆಯನ್ನು ತಿಳಿದು ಮನುಷ್ಯ ಬುದ್ಧಿ ವಿಕಾಸಗೋಸ್ಕರ ಪ್ರಾಣಿಗಳನ್ನು ಮಾನವರಂತೆ ಮಾತಾಡಿಸಿ ಪ್ರಾಣಿಗಳ ಮಹತ್ವವನ್ನು ತಿಳಿಸಲಾಗಿದೆ.

ನಮ್ಮ ದೇಶದಲ್ಲಂತೂ ಕಲ್ಲುಕಲ್ಲನ್ನೂ ಪೂಜಿಸುತ್ತಿದ್ದ ಕಾಲವೊಂದಿತ್ತು. ಪವಿತ್ರ ವನ, ನಾಗಬನ, ದೇವರ ಕಾಡು, ತುಳಸಿಕಟ್ಟೆ, ಅಶ್ವತ್ಥ ಮರಗಳೆಲ್ಲವೂ ಪ್ರಕೃತಿ ಮಾತೆಯ ಮಡಿಲಲ್ಲಿ ಬೆಳೆಯುವ ಪುಣ್ಯ ಸಂಗತಿಗಳು. ಈ ದೇಶದ ನದಿಗಳೋ ದೇವತೆಗಳಂತೆ ಹೆಸರು ಹೊಂದಿ ತೀರ್ಥ ಸ್ನಾನಾದಿಗಳಿಗೆ ಪವಿತ್ರ ಸ್ಥಳಗಳಾಗಿವೆ.

ಇನ್ನು ದೇವ ದೇವತೆಗಳಿಗೆ ಪ್ರಾಣಿಗಳೇ ವಾಹನಗಳು. ಇಲಿಯೊಂದಿಗೆ ಗಣಪತಿ, ಹುಲಿಯೊಟ್ಟಿಗೆ ದೇವಿ, ನವಿಲು ಮತ್ತು ಶಾರದೆ, ಹಾವು ಮತ್ತು ಶಿವ, ಗರುಡ ಮತ್ತು ನಾರಾಯಣ ಆದಿಶೇಷ–ಹೀಗೆ ದೊಡ್ಡ ಪಟ್ಟಿಯನ್ನೇ ಮಾಡಬಹುದು. ಆದರೆ ಹೆಚ್ಚಿನವರು ಪ್ರಾತಃಕಾಲದಲ್ಲಿ ಇವರನ್ನೇ ಧ್ಯಾನಿಸಿಕೊಂಡು ದೈನಂದಿನ ವ್ಯವಹಾರಗಳಲ್ಲಿ ತೊಡಗುತ್ತಾರೆ. ಬದುಕಿನ ಹೆಚ್ಚಿನ ಭಾಗ ಪ್ರಕೃತಿಯ ನಿಯಮಬದ್ಧ, ಸುಂದರ, ವಿಸ್ಮಯಕಾರಿ ಹಾಗೂ ನಿಗೂಢ ಕ್ರಿಯೆಗಳೊಂದಿಗೆ ಸಾಗುತ್ತದೆ. ಮಾನವ ನಿಸರ್ಗದ ನಿಯಮಗಳೊಂದಿಗೆ ಬೆರೆತು ಬೆಸೆದುಕೊಳ್ಳುತ್ತಾ ಸಾಗಿದ್ದಾನೆ. ಅಲ್ಲದೆ ಒಂದು ಜೀವಿಯ ನೆರವಿನಿಂದ ಇನ್ನೊಂದರ ನಿಯಂತ್ರಣವೂ ಸಾಗುತ್ತಾ ಇದೆ.

ಆದರೆ ಇಂದು ಪೇಲವವಾಗುತ್ತಿರುವ ಕುದುರೆಮುಖ, ಕಲ್ಲು ಖಾಲಿಯಾಗುತ್ತಿರುವ ಬಂಟಕಲ್ಲು, ಲಯವಾಗುತ್ತಿರುವ ಪಶ್ಚಿಮಘಟ್ಟ ಮಂಗಮಾಯವಾಗುತ್ತಿರುವ ಅಪೂರ್ವ ಪ್ರಾಣಿಸಂಪತ್ತು, ಪರದೇಶಕ್ಕೆ ರಫ್ತಾಗುತ್ತಾ ರಫ್ತಾಗುತ್ತಾ ಖನಿಜ ಸಂಪತ್ತು ಅಪರೂಪವಾಗಲಿರುವ ಅಪಾಯ, ಹಸಿರೇ ಉಸಿರಿಗೆ ಕಾರಣವಾಗುವ ಅಮೂಲ್ಯ ಗಿಡಮೂಲಿಕೆಗಳಿಗಾಗಿ ಏದುಸಿರು ಬಿಡುವ ಪ್ರಸಂಗಗಳೆಲ್ಲಾ ಪ್ರಕೃತಿಯ ನಿರಂತರ ಉತ್ಪತ್ತಿಗೆ ಧಕ್ಕೆಯೊಡ್ಡಿವೆ. ಚಿನ್ನದ ತತ್ತಿ ಸಿಗುತ್ತದೆಯೆಂದು ಎಲ್ಲಾ ಮೊಟ್ಟೆಗಳನ್ನು ಒಮ್ಮೆಲೇ ಪಡೆದು ಸಿರಿವಂತನಾಗಲು ಹಂಬಲಿಸಿ ಕೋಳಿಯನ್ನೇ ಕತ್ತಿಯಿಂದ ಕತ್ತರಿಸಿದ ದುರಂತಕಥೆಯಿದಾಗಿದೆ.

ನಿಸರ್ಗದ ವ್ಯವಸ್ಥೆಯಲ್ಲಿ ಸಮತೋಲನ ತಪ್ಪುತ್ತಿದೆ. ಆಹಾರದಲ್ಲಿ ಕಲಬೆರಕೆಯಿಂದಾಗುವ ತೊಂದರೆಗಳ ಬಗ್ಗೆ, ಮದ್ಯಪಾನ ಧೂಮಪಾನದ ದುಷ್ಪರಿಣಾಮಗಳ ಬಗ್ಗೆ, ಕುದುರೆ ಜೂಜು ಮೋಜುಗಳಿಂದಾಗುವ ಅನರ್ಥದ ಬಗ್ಗೆ, ಪರಿಸರ ಸಂರಕ್ಷಣೆಯ ಅಗತ್ಯದ ಬಗ್ಗೆ ಅದೆಷ್ಟೋ ಘೋಷಣೆಗಳು, ಆಂದೋಲನಗಳು ಆಗಿವೆ ಮತ್ತು ಹಾಗೆಯೇ ಕರಗಿಹೋಗಿವೆ. ಆದ್ದರಿಂದ ಪರಿಸರ ಮಾಲಿನ್ಯ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಇನ್ನಷ್ಟು ಹೆಚ್ಚು ಜನಜಾಗೃತಿಯಾಗಬೇಕಾಗಿದೆ. □

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ| ಪ್ರೊ| ಗುರುರಾಜ ಭಟ್ಟರ
ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

13. ತೇಜೋನಿಧೀ ಪಂಡಿತರ ಶಿಷ್ಯರಾದ ದೇವೇಂದ್ರ ಪಂಡಿತರನ್ನು ಕ್ರಿ.ಶ.1159ರ ಅರಸಿಕೆರೆ ತಾಲೂಕು ಸೂಳಕೇರಿ ಮಾಧವೇಶ್ವರ ದೇವಸ್ಥಾನ ದಲ್ಲಿ ದೊರಕಿದ ಶಿಲಾಲೇಖದಲ್ಲಿ ಸ್ಥಾನಪತಿ ದೇವೇಂದ್ರ ಪಂಡಿತ ಎಂದು ಸಂಬೋಧಿಸಿದೆ. ಆ ವರ್ಷದಲ್ಲಿ ಮೂಲಸ್ಥಾನ ದೇವರ ಪರವಾಗಿ ಆತನ ಭೂದಾನವನ್ನು ಭಾವ ಹೆಗ್ಗಡೆಯಿಂದ ಪಡೆದನು.

14. ಹೊಯ್ಸಳ ಅರಸನಾದ ಎರಡನೆಯ ವೀರ ಬಲ್ಲಾಳನ ಕಾಲದ ಕ್ರಿ.ಶ.1185ರ ಒಂದು ಶಾಸನವು ಮಹಾದೇವ ಎಂಬಾತನನ್ನು ಅಂತರ್ಪಳ್ಳಿ ಹಳ್ಳಿಯ ದೇವಸ್ಥಾನದ ಸ್ಥಾನಪತಿಯನ್ನಾಗಿ ನೇಮಿಸಿದ ದಾಖಲೆ ಇದೆ.

15. ಮೈಸೂರು ರಾಜ್ಯದ ಶಿಕರಪುರ ತಾಲೂಕಿನ ಬೆಳ್ಳಿಗಾಮೆ ಎಂಬಲ್ಲಿಯ ಕೇದಾರವೆಂಬ ಸುಪ್ರಸಿದ್ಧ ದೇಗುಲದ ಸ್ಥಾನಾಚಾರ್ಯನನ್ನಾಗಿ ಪ್ರಖ್ಯಾತ ವಾಮಶಕ್ತಿ ದೇವನನ್ನು ನೇಮಿಸಿದಂತೆ ಕ್ರಿ.ಶ.1193ರ ಶಾಸನ ತಿಳಿಸುತ್ತದೆ.

16. ಕ್ರಿ.ಶ.1703ರ ಅರಸಿಕೆರೆ ದೇವಸ್ಥಾನದಲ್ಲಿ ದೊರಕಿದ ಶಾಸನಪ್ರಕಾರ ಹೊನ್ನಾಳಿ ತಾಲೂಕಿನ ನಾಗೇಶ್ವರ ದೇಗುಲದ ಅಧಿಕಾರಿಗಳಾದ ಸ್ಥಾನಾಚಾರ್ಯ ಸೋಮಾಚಾರ್ಯ ಎಂಬವರಿಗೆ ದಾನವು ಕೊಡಲ್ಪಟ್ಟಿತ್ತು.

17. ಬಂದಣಿಕೆಯ ಸೋಮನಾಥ ದೇವರಿಗೆ ಎಳೆಬಳ್ಳಿ ಮತ್ತು ಸಿರಿವೂತ ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟಾಗ (ಕ್ರಿ.ಶ.1216) ಈ ಕೆಳಗಿನ ಸ್ಥಾನಪತಿಗಳ ಅವಗಾಹನೆಯಿಂದ ಮಾಡಿದ್ದಾಗಿತ್ತು.

ಬಂದಣಿಕೆಯ ಸೋಮನಾಥ ದೇವಸ್ಥಾನದ ಸ್ಥಾನಪತಿಯಾದ ಭೈರಮಜೀಯ; ನಖಾರೇಶ್ವರ ದೇವರ ಸ್ಥಾನಪತಿಯಾದ ನಾಕೆಯಜೀಯ; ಕುಪ್ಪೆತ್ತೂರಿನ ಕೋಟೇಶ್ವರ ದೇವರ ಸ್ಥಾನಪತಿಯಾದ ಸರ್ವೇಶ್ವರ ದೇವ; ಮತ್ತು ಯಮ್ಮನೂರು ಗ್ರಾಮದ ರಾಮೇಶ್ವರ ದೇವಸ್ಥಾನದ ಸ್ಥಾನಪತಿಯಾದ ರುದ್ರಧ್ವಜ.

18. ಕ್ರಿ.ಶ.1231ರ ಶಿಲಾಲೇಖದಲ್ಲಿ ರುದ್ರಶಕ್ತಿ ಪಂಡಿತದೇವನನ್ನು ಸಪ್ತ ಹತ್ತಾರಿ ಸ್ಥಾನಾಚಾರ್ಯನೆಂಬುದಾಗಿ ಸಂಬೋದಿಸಿದೆ.

19. ಮೂರನೆಯ ರಾಜೇಂದ್ರ ಚೋಳನ ಆಡಳಿತೆಯಲ್ಲಿ ಕೆಲವು ದೇವಸ್ಥಾನಗಳ ತನಿಕೆಯನ್ನು ನಡೆಸುವುದಕ್ಕೋಸ್ಕರ ನೇಮಿಸಿದ ಮಂಡಳಿಯಲ್ಲಿ ಸೋಮಯ್ಯ ದಂಡನಾಯಕ, ಸೇವಯ್ಯ ದಂಡನಾಯಕ, ಸೋಮನಾಥ ವಿಟ್ಟಯ್ಯ, ಮಹೇಶ್ವರರು, ಸ್ಥಾನಿಕರು ಮತ್ತು ವ್ಯಾಪಾರಸ್ಥರು ಸೇರಿಸಲ್ಪಟ್ಟುದು ತಿಳಿದು ಬರುತ್ತದೆ.

20. ಶಂಕರನಾಯಿರ್ನಕೊಯಿಲ್ (ತಿನ್ನವೆಲ್ಲಿ ಜಿಲ್ಲೆ) ಎಂಬ ತಾಲೂಕಿನಲ್ಲಿಯ ಶಾಸನ ಒಂದರಲ್ಲಿ ದೇವಸ್ಥಾನದ ಸ್ಥಾನಿಕರಿಗೆ ವಿಕ್ರಮ ಪಾಂಡ್ಯರಾಜನು ತನ್ನ ಆಳ್ವಿಕೆಯ ಆರನೆಯ ವರ್ಷದಲ್ಲಿ ಭೂದಾನ ಕೊಟ್ಟ ದಾಖಲೆ ಗಣನೀಯವಾಗಿದೆ.

21. ಹಿರಿದಾದ ಹಾಗೂ ಪ್ರಾಮುಖ್ಯ ಘಟನೆಗಳಿಗೆ ಸ್ಥಾನಿಕರು ಸಾಕ್ಷಿಗಳಾಗಿದ್ದುದು ದಾಖಲೆಗಳಿಂದ ತಿಳಿದು ಬರುತ್ತದೆ. ಕ್ರಿ.ಶ.1288ರ ಶಿಲಾಲೇಖದಲ್ಲಿ ಮಲ್ಲಯ್ಯನ ಹಳ್ಳಿಗೋರೇಶ್ವರ ದೇವರಿಗೆ ಬಿಟ್ಟ ಉಂಬಳಿಯು ಮೊಸಳೆಯ 120 ಸ್ಥಾನಿಕರ ಸಮಕ್ಷಮ ನಡೆದುದಾಗಿದೆ. ಅದೇ ರೀತಿಯಲ್ಲಿ 120 ಸ್ಥಾನಿಕರ ಸಾಕ್ಷಿಯು ಗೌರೇಶ್ವರ ದೇವಸ್ಥಾನದ ಇನ್ನೊಂದು ಶಾಸನದಲ್ಲಿ ಕಂಡು ಬರುತ್ತದೆ.

22. ಕ್ರಿ.ಶ.1252ರ ಶಾಸನವು ಹೆಚ್ಚಿನ ಪ್ರಾಮುಖ್ಯತೆಯುಳ್ಳದ್ದಾಗಿದೆ. ರಾಮನಾಥಪುರದ ರಾಮೇಶ್ವರ ದೇವಸ್ಥಾನದಲ್ಲಿ ದೊರಕಿದ ಈ ಶಾಸನವು ಕೆಲಾಸಶಿವಜೀಯ, ಮಾದಜೀಯ, ಕಾಳಜೀಯ, ಅಪ್ಪಜೀಯ, ಅರಸಜೀಯ, ಮತ್ತು ಗೋವಣ್ಣ ಎಂಬ ಸ್ಥಾನಪತಿಗಳು ರಾಮನಾಥ ದೇವರ ಪ್ರಸಾದವನ್ನು ವೈಸರಾಯರುಗಳಾದ ಸೋಮದೇವರಸ ಮತ್ತು ಬೊಪ್ಪ ದೇವರಸರಲ್ಲಿಗೆ ಕೊಂಡು ಹೋಗಿ ಅವರನ್ನು ಹರಸಿದ ದಾಖಲೆ ಇದೆ.

23. ಕ್ರಿ.ಶ.1255ರ ಶಾಸನದಲ್ಲಿ ಕುಂಜೇಶ್ವರ ದೇವಸ್ಥಾನವು ವ್ಯವಹಾರದಲ್ಲಿ 120 ದೇವಸ್ಥಾನಗಳ ಸ್ಥಾನಿಕರ ಪ್ರತಿನಿಧಿಯಾದ ಕಂಪನಾಚಾರ್ಯನೆಂಬುದನ್ನು ಇತರ ಗೌರವಾನ್ವಿತರಾದ ಪುರಜನರೊಡನೆ ಸಹಕರಿಸಿದ ರೀತಿ ತಿಳಿದು ಬರುತ್ತದೆ.

24. ಕ್ರಿ.ಶ.1256ರ ಮಲ್ಲೇಶ್ವರ ಶಿಲಾಶಾಸನ ದಲ್ಲಿ ಸ್ಥಾನಿಕರು ತಮ್ಮ ಅಧೀನದಲ್ಲಿದ್ದ ಸಾರ್ವಜನಿಕ ಉಂಬಳಿಯನ್ನು ಯಾವ ರೀತಿಯಲ್ಲಿ ನಿಷ್ಪಕ್ಷಪಾತ ವಾಗಿ ವ್ಯವಹರಿಸಿದರೆಂಬುದರ ಉಲ್ಲೇಖವಿದೆ.

25. ಮೈಸೂರು ರಾಜ್ಯದ ತರಿಕೆರೆ ತಾಲೂಕಿನ ಸೋಮಪುರದಲ್ಲಿ ದೊರಕಿದ ಸೋಮನಾಥ ದೇವಾಲಯಕ್ಕೆ ಸಂಬಂಧಿಸಿದ ಕ್ರಿ.ಶ.1260ರ ಶಿಲಾಲೇಖದಲ್ಲಿ ಸ್ಥಾನಿಕ ಸಂಕಯ್ಯನಿಗೆ ದೇಗುಲದ ಸೇವಾರ್ಥವಾಗಿ ತೆರಿಗೆ ರಹಿತವಾಗಿ ಭೂಮಿಯನ್ನು ಕೊಟ್ಟ ದಾಖಲೆ ಇದೆ.

26. ಪಾಂಡ್ಯ ದೇಶದ ಹೆಗ್ಗಡೆ ದೇವನ ಕೋಟೆ ತಾಲೂಕಿನ ಕ್ರಿ.ಶ.1264ರ ಶಿಲಾಲೇಖದಲ್ಲಿ ಹರಿಪಿಜೀಯನ ಮಗನಾದ ನಾಗದೇವನು ಸ್ಥಾನಿಕನಾಗಿದ್ದುದು ಕಂಡು ಬರುತ್ತದೆ.

27. ಕ್ರಿ.ಶ.1267ರ ಬೋರಪುರದ (ಕೃಷ್ಣರಾಜ ಪೇಟೆ ತಾಲೂಕು) ಈಶ್ವರ ದೇವಸ್ಥಾನದ ಶಾಸನದಲ್ಲಿ ಇರುವ ಉಲ್ಲೇಖ "ಮಾಚನೆಕಟ್ಟೆ ಸ್ಥಾನಿಕರ ತಮ್ಮಳಿಯ ಆಚಾರ್ಯ ಭಂಡಾರದ ಮಂಡಯ್ಯದ ಮಾರಯ್ಯ"ನಿಗೆ ದೇವಕ್ಕದತ್ತ ಮಾಡಿದ ಪ್ರೀತಿಯ ಉಂಬಳಿ.

28. ಸ್ಥಾನಿಕರಿಗೆ ಸಿಕ್ಕುತ್ತಿದ್ದ ಗೌರವವು ಕ್ರಿ.ಶ. 1268ರ ಹಿರೇಕೋಗಿಲೂರು ಶಾಸನದಿಂದಲೂ ಮತ್ತು ಕ್ರಿ.ಶ.1285ರ ಹಿರಿಯ ಹಳ್ಳಿಗೊಟ್ಟಗನ ಕೆರೆಯ ಶಾಸನದಲ್ಲಿ ಸ್ಪಷ್ಟ ತಿಳಿದು ಬರುತ್ತದೆ. ದಕ್ಷಿಣಾದಿತ್ಯ ಪೊಳಲು ಯಾ ಕೋಗಿಲೂರು ಅಗ್ರಹಾರದ ಪ್ರಸಿದ್ಧ ಬಿಲ್ಲೇಶ್ವರ ದೇವರ ಯಾವತ್ತು ದೇವತಾ ಕಾರ್ಯಗಳಿಗೆ ಚಂಡರಸನೆಂಬ ನೊಲಂಬವಾಡಿ, 32000 ಪ್ರಾಂತ್ಯದ ಬಂಡೆಯನ್ನು ಉಂಬಳಿಯಾಗಿ, ಭೂಮಿಯನ್ನು ದಾನವಾಗಿ ತೆತ್ತಾಗ, ಸ್ಥಾಣಿಕ ದಂಡ ಪ್ರಾಣಿಗುರು ಎಂಬವನ ಪಾದಗಳನ್ನು ತೊಳೆದು ಇನ್ನಿತರ ಗ್ರಾಮದ ಸಭ್ಯ ಗ್ರಹಸ್ಥರ ಸಮಕ್ಷಮ ಮಾಡಿದುದೆಂದು ಬರೆದಿದೆ. ಅಂತೆಯೇ ಮೇಲಿನ ಎರಡನೆಯ ಶಾಸನದ ಪ್ರಕಾರ ಮಂಜೇಶ್ವರ ದೇವರ ಪೂಜಾದಿ ವಿನಿಯೋಗಗಳಿಗೆ ಉಪಯೋಗಿಸಲೋಸುಗ, ಲಲಾಮದೇವ ಮತ್ತು ಆತನ ಸಹೋದರನು ಬಿಟ್ಟ ಭೂಮಿಯನ್ನು ಆ ದೇವಸ್ಥಾನದ ಸ್ಥಾನಿಕನ ವಶ, ಆತನ ಪಾದಗಳನ್ನು ತೊಳೆದು ಕೊಟ್ಟಿದೆ.

29. ಸ್ಥಾನಿಕರು 13ನೆಯ ಶತಮಾನದಲ್ಲಿ ದೇವಸ್ಥಾನದ ವ್ಯವಸ್ಥಾಪಕರಾಗಿದ್ದರೆಂಬುದನ್ನು ಕ್ರಿ.ಶ.1268ರ ಶಾಸನವು ವಿಷಧೀಕರಿಸುತ್ತದೆ. ನಿರುಗುಂದ ಸಿದ್ದೇಶ್ವರ ದೇವಸ್ಥಾನದ ಸ್ಥಾನಿಕ ಪುರೋಹಿತನಾದ (ಪೂಜಾರಿ) ನಲ್ಲಜೀಯನ ಮಗ ಸಿದ್ಧಜೀಯನ ಮರಣಾನಂತರ ದೇವಸ್ಥಾನದಲ್ಲಿ ಅರ್ಚಕರಿಲ್ಲದೆ ಹೋಯಿತು.

(ಮುಂದುವರಿಯುವುದು)

# ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಮತ್ತು ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯ ಸಂಬಂಧ

– ಡಾ| ಎಚ್.ವಿ.ನರಸಿಂಹಮೂರ್ತಿ, ವಿಶ್ರಾಂತ ಪ್ರಾಧ್ಯಾಪಕರು, ಕುಂದಾಪುರ-576 201.

(ಹಿಂದಿನ ಸಂಚಿಕೆಯಿಂದ...)

ಕೆಳದಿನೃಪವಿಜಯ, ಗುರುವಂಶಕಾವ್ಯ, ಶಿವತತ್ತ್ವ ರತ್ನಾಕರ ಮೊದಲಾದ ಗ್ರಂಥಗಳಲ್ಲಿ ಕೆಳದಿಯ ದೊರೆಗಳು ದಕ್ಷಿಣ ಕನ್ನಡದ ಕಡೆಗೆ ಬರುವಾಗಲೆಲ್ಲ ಶೃಂಗೇರಿಗೆ ತೆರಳಿ ಜಗದ್ಗುರುಗಳ ಆಶೀರ್ವಾದ ಪಡೆದು, ಅವರನ್ನು ಮುಂದಿರಿಸಿ ಕೊಂಡು ಬರುತ್ತಿದ್ದರೆಂದು ಹೇಳಲಾಗಿದೆ. ಉದಾಹರಣೆಗೆ ಕೆಳದಿಯ ಇಮ್ಮಡಿ ಸೋಮಶೇಖರ ನಾಯಕನು ಶೃಂಗೇರಿಯ ಶಾರದಾಂಬೆಯ ಮಡಿಲಲ್ಲಿ ದ್ವಿತೀಯ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳವರ ಸಂದರ್ಶನ ಪಡೆದು, ಅವರ ಆಶೀರ್ವಾದದೊಂದಿಗೆ ಸುಬ್ರಹ್ಮಣ್ಯ, ಕೋಟೇಶ್ವರ, ಬಸರೂರು ಮೂಲಕ ಕೊಲ್ಲೂರಿಗೆ ತೆರಳಿದ ಉಲ್ಲೇಖ ಲಿಂಗಣ್ಣಕವಿಯ 'ಕೆಳದಿ ನೃಪವಿಜಯ' ದಲ್ಲಿದೆ. (ಮತ್ತ ಮದಲ್ಲದಾ ಸೋಮಶೇಖರ ರಾಜೇಂದ್ರಚಂದ್ರಂ ಶೃಂಗಪುರದೊಳ್ ಶಾರದಾಂಬಾಪೀಠಸನ್ನಿಧಿಯೊಳೆನೆವ ಚೌಕಿಯೋಳ್ ಸರ್ವಸಂಭ್ರಮದಿಂ ಸಚ್ಚಿದಾನಂದ ಭಾರತೀ ಸ್ವಾಮಿಯವರಂ ಭೇಟಿಗೊಂಡಾಪುರ ದೊಳ್ ನಾಲ್ದಿವಸಮಿರ್ದಾ ಯತೀಂದ್ರನನುಚಿತ ಮಾದುಡುಗೊರೆ ಮುಂತಾದುಪಚಾರಂಗಳಿಂ ಸನ್ಮಾನಿಸಿಯವರಿಂ ತಾನುಂ ಸನ್ಮಾನಂ ಚಿತ್ತನಂತರ ಮಲ್ಲಿತೆರಳ್ದು ಚಳಕದೆ ಕಳಸದ ಘಟ್ಟವನಿಳಿದಾ ಭೂಮಿಶವರ್ಯ ಸುಬ್ರಹ್ಮಣ್ಯ ಸ್ಥಳಕ್ಕೈದಿ ಪೆರ್ಮೆಯಿಂ ಮಂಜುಳಸುಬ್ರಹ್ಮಣ್ಯ ದೇವರಂ ಭಜಯಿಸಿದಂ.... ಪೊರಮಟ್ಟಲ್ಲಿಂ ಕೋಟೇಶ್ವರಕ್ಕೈದುತೆ... ಕೆ.ನೃ.ವಿ. ಪುಟ 110)

ಕ್ರಿ.ಶ.1663ರಲ್ಲಿ ಕೆಳದಿ ಅರಸ ವೀರಭದ್ರಪ್ಪನ ನಿರ್ದೇಶನದಂತೆ ಶೃಂಗೇರಿ ಜಗದ್ಗುರುಮಹಾ ಸ್ವಾಮಿಗಳವರಿಗೆ ಕೆಳದಿ ಸಂಸ್ಥಾನದ ಘಟ್ಟದ ಕೆಳಗಿನ ಪರಶುರಾಮ ಕ್ಷೇತ್ರದ ಕೋಟೆಗಳಲ್ಲಿ ವಾಸಮಾಡಿ ಕೊಂಡಿದ್ದ ಬಾರ್ಕೂರು, ಮಂಗಳೂರು, ಕುಂಬಳೆ, ಬಗ್ವಾಡಿ, ಕುಂದಾಪುರ, ಗಂಗೊಳ್ಳಿ-ಮುಂತಾದ ಸ್ಥಳಗಳಲ್ಲಿದ್ದ ರಾಮಕ್ಷತ್ರಿಯರು ಬಿನ್ನವತ್ತಳೆ ಬರೆದು ಕೊಟ್ಟು, ತೀರ್ಥಪ್ರಸಾದ-ವಿಭೂತಿ-ಜನಿವಾರ ಕಾಣಿಕೆ ಸಲ್ಲಿಸಿ, 'ನೀವು ನಮಗೆ ಸಮಸ್ತರಿಗೆ ಗತಿ ಹೊಂದಿಸಬೇಕು' ಎಂದು ಕೇಳಿಕೊಂಡು ಶಿಷ್ಯರಾದ ಕುರಿತು ದಾಖಲೆಗಳಿವೆ (ರಾಮಕ್ಷತ್ರಿಯರ ಮೂಲಶೋಧ ಮತ್ತು ಸಂಸ್ಕೃತಿ ಸಂಪ್ರದಾಯ ಪುಟ 87) ಇಂದಿಗೂ ಬೈಂದೂರಿನಿಂದ ಕಾಸರಗೋಡು ವರೆಗೆ ಸಹಸ್ರ-ಸಹಸ್ರ ಸಂಖ್ಯೆಯಲ್ಲಿರುವ ರಾಮಕ್ಷತ್ರಿಯರು ಶ್ರೀಮಠದ ಕುರಿತು ತೀವ್ರವಾದ ಶ್ರದ್ಧಾ-ಭಕ್ತಿಗಳನ್ನು ಹೊಂದಿ ವಿನೀತ ಶಿಷ್ಯ ರಾಗಿದ್ದಾರೆ.

ಟಿಪ್ಪು ಸುಲ್ತಾನನು ಒಮ್ಮೆ ಕಾರ್ಕಳದಲ್ಲಿ ಮೊಕ್ಕಾಂ ಮಾಡಿದ್ದಾಗ ಶೃಂಗೇರಿ ಮಠವನ್ನು ಪರಶುರಾಮಬಾಹುವಿನ ದಳದವರು ಕೊಳ್ಳೆ ಹೊಡೆದರೆಂದು ಶ್ರೀಮಠದ ನಾಲ್ಕು ಜನ ಶಿಷ್ಯರು ಬಂದು ಬಿನ್ನವಿಸಿದರು. ಸುಲ್ತಾನರು ಕೂಡಲೆ ಕಾರ್ಕಳದಿಂದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮಿಗಳಿಗೆ ಒಂದು ಪತ್ರ ಬರೆದು, ಮರಾಠರು ಶಾರದಮ್ಮನವರ ವಿಗ್ರಹವನ್ನು ಕಿತ್ತು ಹಾಕಿ ಮಠದ ಸ್ವತ್ತುಗಳನ್ನು ಲೂಟಿ ಮಾಡಿದ ಬಗ್ಗೆ ವಿಷಾದ ವ್ಯಕ್ತಪಡಿಸಿ, ಅಮ್ಮನವರ ಪುನಃ ಪ್ರತಿಷ್ಠೆಗೆ ಬೇಕಾಗುವ ಸಾಮಾನು-ಸರಂಜಾಮು ಹಾಗೂ ನಗದುಹಣ ಕೊಡುವಂತೆ ನಗರದ ಅಸಫನಿಗೆ ತಾವು ಆಜ್ಞೆ ಮಾಡಿರುವುದಾಗಿಯೂ, ಶ್ರೀಗಳವರು ದೇವರ ಸೇವೆ ನಡೆಯುವಂತೆ ಮಾಡಿ ತಮ್ಮ (ಸುಲ್ತಾನರ) ಶ್ರೇಯಸ್ಸು ಅಭಿವೃದ್ಧಿ ಆಗುವ ಹಾಗೂ ಶತ್ರು ವಿನಾಶವಾಗುವ ಹಾಗೂ ತಪಸ್ಸು ಮಾಡಿಕೊಂಡು ಸ್ವಸ್ಥದಲ್ಲಿ ಇರಬೇಕೆಂದು ವಿನಂತಿಸಿದ ಕುರಿತು ಶ್ರೀಮಠದಲ್ಲಿ ದಾಖಲೆಗಳಿವೆ (ಎಸ್.ಜಿ.ಆರ್.47)

**ಬ್ರಿಟಿಷರ ಕಾಲದಲ್ಲಿ**

ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧ ದಲ್ಲಿ (1815ನೇ ಇಸವಿ) ದಕ್ಷಿಣಕನ್ನಡಕ್ಕೆ ನಿಯುಕ್ತರಾದ ಬ್ರಿಟಿಷ್ ಕಮಿಷನರು ತೀರ್ಥ ಯಾತ್ರೆಗೆ ಹೊರಟ ದ್ವಿತೀಯ ಶ್ರೀಅಭಿನವ ಸಚ್ಚಿದಾನಂದ ಭಾರತೀ ಸ್ವಾಮಿಗಳವರನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಆದರದಿಂದ ಬರಮಾಡಿಕೊಂಡು, ಅವರಿಗೆ ಬೇಕಾದ ಎಲ್ಲ ಸೌಕರ್ಯಗಳನ್ನು ಒದಗಿಸಿ ಕೊಡುವಂತೆ 1815ನೇ ಇಸ್ವಿಡಿ 23ರಂದು ಜಿಲ್ಲೆಯ ಮ್ಯಾಜಿಸ್ಟ್ರೇಟರು, ಪೊಲೀಸರು, ದರೋಗ, ಸುಬೇದಾರ, ಜಮಾದಾರ, ದಫೇದಾರ ಮುಂತಾದವರಿಗೆ ಆಜ್ಞೆ ವಿಧಿಸಿದರೆಂದು ಒಂದು ಕಡಿತದಲ್ಲಿ ಬರೆಯಲಾಗಿದೆ.

"…. ಕನ್ನಡ ಜಿಲ್ಲಾ ಮ್ಯಾಜಿಸ್ಟ್ರೇಟ ಅಧಿಕಾರ ಸ್ಥಾನದಿಂದ, ಪುಲಿಸದರೋಗ, ಸುಬೇದಾರ, ಜಮೇದಾರ ಧಫದಾರವಗೈರಯವರ್‍ರಿಗೆ ಹುಕುಂ ಯೇನೆಂದರೆ ಶೃಂಗೇರಿಮಠದ ಸ್ವಾಮಿಗಳು, ಈ ಸಂವತ್ಸರದ ಮಾಘಮಾಸದಲ್ಲಿ ಗೋಕರ್ಣ ಮುಂತಾದ ಕ್ಷೇತ್ರಗಳ ಸಂಚಾರಾರ್ಥವಾಗಿ ತೆರಳಿ ಬರುಥಾರಾದ್ರಿಂದ ಅವರು ನಿಮ್ಮ ಚಕ್ಕಬಂದಿ ಠಾಣ್ಯಗಳ ಮಾರ್ಗವಾಗಿ ಬಂದಲ್ಲಿ ನೀವು ಅವರ ಭೆಟ್ಟಿಮಾಡಿಕೊಂಡು ಅವರಿಗೆ ಬೇಕಾದ ಮಜೂರಿ ಬಾಬತ್ತು ಜಿನಸು ಸಹಾ ಕೊಡಿಸಿಕೊಟ್ಟು ಸರಬರಾಯಿ ಮಾಡಿಸುವುದು. ತಾರೀಕು 25ನೇ ದಶಂಬರ ಸನ್ 1815ನೇ ಯಿಸವೀ ಯುವ ಸಂವತ್ಸರದ... (ಕ.33ದಾ.23)

ಶ್ರೀಗಳವರು ಗೋಕರ್ಣ, ಕೊಲ್ಲೂರು ಯಾತ್ರೆ ಮುಗಿಸಿ, ಬಹುಶಃ ಹಾಲಾಡಿ ಮಾರ್ಗವಾಗಿ ಶೃಂಗೇರಿಗೆ ತೆರಳುವಾಗ ಈ ಮೇಲ್ಕಂಡ ವ್ಯವಸ್ಥೆ ಮಾಡಲಾಗಿತ್ತೆಂದು ಈ ರಹದಾರಿ ಪತ್ರ ತಿಳಿಸುತ್ತದೆ.

ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆ ಮದ್ರಾಸ್ ರಾಜ್ಯಕ್ಕೆ ಸೇರಿತ್ತು. ಮದ್ರಾಸ್ ಸರಕಾರವು ಶೃಂಗೇರಿ ಜಗದ್ಗುರುಗಳು ಎಲ್ಲೆಲ್ಲಿ ಸಂಚರಿಸುವರೋ ಅಲ್ಲೆಲ್ಲ ಅವರಿಗೆ ಭವ್ಯ ಸ್ವಾಗತ ನೀಡಿ, ಬೇಕಾದ ಎಲ್ಲ ಸೌಲಭ್ಯ ಒದಗಿಸಬೇಕೆಂದು ಸಂಬಂಧಿಸಿದ ಎಲ್ಲ ಅಧಿಕಾರಿಗಳಿಗೆ ಆಜ್ಞೆ ಹೊರಡಿಸಿತ್ತು (ಎಸ್.ಜಿ.ಆರ್.186). ಬ್ರಿಟಿಷ್ ಸರಕಾರ ಶೃಂಗೇರಿ ಮಠದ ವರಿಷ್ಠತೆಯನ್ನು ಎಷ್ಟೊಂದು ಮಾನ್ಯತೆ ಮಾಡಿತ್ತೆಂಬುದು ಮೈಸೂರಿನ ಚೀಫ್ ಕಮಿಷನರ್ ಚಾರಿಂಗ್ ಸಾಹೇಬರ ಈ ಮಾತುಗಳಿಂದ ವ್ಯಕ್ತವಾಗುತ್ತದೆ.

ಶೃಂಗೇರಿ ಜಗದ್ಗುರುಗಳು ಆದಿಶಂಕರಾ ಚಾರ್ಯರ ನೇರಪ್ರತಿನಿಧಿಗಳು. ಅವರನ್ನು ಕೇವಲ ದಕ್ಷಿಣ ಹಿಂದುಸ್ಥಾನದ ಹಿಂದುಗಳಷ್ಟೇ ಅಲ್ಲದೆ ಉತ್ತರದ ಮರಾಠಾರಾಜಮನೆತನದವರಾದ ಹೋಳ್ಕರ ಮತ್ತು ಪೇಶ್ವೆಗಳೂ ಅತ್ಯುಚ್ಚ ಧರ್ಮಗುರುಗಳೆಂದು ಪರಿಗಣಿಸುವರು. ಇಡೀ ಭಾರತದಲ್ಲೇ ಅವರು ಹಿಂದೂ ಧರ್ಮದ ಅತ್ಯುಚ್ಚಗುರುಗಳಾದ್ದರಿಂದ ಜನರು ಅವರಿಗೆ ಅಪರಿಮಿತ ಗೌರವ ಸಲ್ಲಿಸುತ್ತಾರೆ. ಅಡ್ಡಪಲ್ಲಕ್ಕಿಯಲ್ಲಿ ತಿಷ್ಠಿಸಲು ಅವರೊಬ್ಬರೇ ಅರ್ಹರು. ನಿಝಾಮ, ಪೇಶ್ವೆ, ಮೈಸೂರು ರಾಜರು, ಹೋಳ್ಕರ ಮತ್ತಿತರರು ಕೊಟ್ಟ ಹಲವಾರು ಪ್ರಾಚೀನ ಈ ಸನದುಗಳನ್ನು ಅವರು ಇರಿಸಿ ಕೊಂಡಿರುತ್ತಾರೆ. ಆ ಸನದುಗಳಿಂದ ಆ ಎಲ್ಲ ರಾಜಮನೆತನದವರಿಗೆ ಶೃಂಗೇರಿ ಜಗದ್ಗುರುಗಳ ಬಗ್ಗೆ ಎಷ್ಟೊಂದು ಭಕ್ತಿ ಮತ್ತು ಗೌರವವಿತ್ತೆಂಬುದು ತಿಳಿಯುತ್ತದೆ. (ಎಸ್.ಜಿ.ಆರ್.187)

ವಿಧರ್ಮೀಯನೊಬ್ಬನು ಶೃಂಗೇರಿ ಜಗದ್ಗುರು ಗಳವರ ಕುರಿತು ಆಡಿರುವ ಈ ಮಾತುಗಳು ಅವರ ಹಿರಿಮೆ-ಗರಿಮೆಗಳನ್ನೂ, ಸನಾತನ ಧರ್ಮಾವ ಲಂಬಿಗಳ ಕುರಿತು ಅವರಿಗಿದ್ದ ಪ್ರಭುತ್ವವನ್ನು ಸೂಚಿಸುತ್ತವೆ. ತಮ್ಮ ಮೇಲಧಿಕಾರಿಗಳ ಈ ಅತಿಶಯವಾದ ಶ್ರದ್ಧಾಭಕ್ತಿ ಮತ್ತು ನೇರ ಆಜ್ಞೆಯಿಂದಾಗಿ ಮದ್ರಾಸು ರಾಜ್ಯಕ್ಕೆ ಅಧೀನಪಟ್ಟ ದಕ್ಷಿಣಕನ್ನಡ ಜಿಲ್ಲೆಯ ಬ್ರಿಟಿಷ್ ಅಧಿಕಾರಿ ವರ್ಗದವರು ಶೃಂಗೇರಿ ಜಗದ್ಗುರುಗಳ ತೀರ್ಥಯಾತ್ರೆ, ವಾಸ್ತವ್ಯ ಇತ್ಯಾದಿಗಳ ಬಗ್ಗೆ ವಿಶೇಷ ಕಾಳಜಿ ವಹಿಸಿ ವ್ಯವಸ್ಥೆ ಮಾಡುತ್ತಿದ್ದರು.

**ಕುಂದಾಪುರದ ಶಾಸನ**

ಕುಂದಾಪುರ ಸಮೀಪ ವಡೇರಹೋಬಳಿಯಲ್ಲಿ ಶಿಲಾಶಾಸನವೊಂದು ದೊರಕಿದೆ. ಇದರ ಕಾಲ ಕ್ರಿ.ಶ.1406. ಕೋಟೇಶ್ವರನಿಗೂ, ಕುಂದೇಶ್ವರ ನಿಗೂ ಒಟ್ಟಿಗೆ ಮಾಡಿದ ದಾನದ ವಿಚಾರ ಇದರ ಮುಖ್ಯ ವಸ್ತು. ಕೋಟೇಶ್ವರನಿಗೆ ಮೂರು ಮುಡಿ ಭತ್ತ, ಕುಂದೇಶ್ವರನಿಗೆ ಅರುವತ್ತು ಹಾನೆ ಅಕ್ಕಿ ವರ್ಷಂಪ್ರತಿ ದೊರೆಯುವಂತಹ ಭೂಮಿಯನ್ನು 'ಹಂಗರಅಧಿವಾಸ'ದ (ಹಂಗಾರಕಟ್ಟೆ) ಇಬ್ಬರು ದಣಿಗಳು ಮತ್ತು ಇಬ್ಬರು ಭಟ್ಟರೂ ಕೂಡಿ ಶೃಂಗೇರಿಯ ಶ್ರೀನರಸಿಂಹ ಭಾರತೀ ವೊಡೆಯರಿಗೆ ಮೂಲಕ್ರಯದಾನ ಮಾಡಿದರು.

(ಮುಂದುವರಿಯುವುದು)

# ಮಟ್ಟು ಕೃಷ್ಣಕುಮಾರ್‌ರಾವ್ ಇವರಿಗೆ ಸನ್ಮಾನ



1976ರಿಂದ 2005ರ ವರೆಗೆ ಉಡುಪಿ ತಾಲೂಕು ಕುಂಜಾರುಗಿರಿಯಲ್ಲಿ ಶ್ರೀ ಕುಂಜಾರು ಗಿರಿಜಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 29 ವರ್ಷ ಅಧ್ಯಾಪಕರಾಗಿ ಕೆಲಸ ನಿರ್ವಹಿಸಿದ್ದು, ಪ್ರಕೃತ ಉದ್ಯಾವರದ ಹಿಂದೂ ಹಿ.ಪ್ರಾ.ಶಾಲೆಯಲ್ಲಿ ಸೇವೆಯಲ್ಲಿರುವ ಶ್ರೀ ಕೃಷ್ಣಕುಮಾರ್ ರಾವ್ ಮಟ್ಟು ಇವರನ್ನು ಕುಂಜಾರುಗಿರಿಯ ನವಜ್ಯೋತಿ ಯುವಕ ಮಂಡಲ, ಹಳೆವಿದ್ಯಾರ್ಥಿಗಳು ಹಾಗೂ ಊರವರು ಜೊತೆಯಾಗಿ ಸನ್ಮಾನಿಸಿ ಗೌರವಿಸಿದರು.

ಸಮಾಜ ಕಲಾರತ್ನ ಪ್ರಶಸ್ತಿ ವಿಜೇತರಾದ ಕಾಪು ಲೀಲಾಧರ ಶೆಟ್ಟಿಯವರು ಶ್ರೀಯುತರನ್ನು ಶಾಲು, ಹಾರ, ಫಲಪುಷ್ಪ, ಮಾನಪತ್ರ, ಸ್ಮರಣಿಕೆಯೊಂದಿಗೆ ಸನ್ಮಾನ ಮಾಡಿದರು. ಟೀಚರ್‍ಸ್ ಕೋ- ಓಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಕುರ್ಕಾಲು ದಿನಕರ ಶೆಟ್ಟಿ, ಮುಖ್ಯ ಅಧ್ಯಾಪಕರಾದ ಶ್ರೀ ಸತೀಶ್ ಶೆಟ್ಟಿ ಬಿಳಿಯಾರು, ಗ್ರಾಮ ಪಂಚಾಯತ್ ಉಪಾಧ್ಯಕ್ಷರು ಹಾಗೂ ಯುವಕ ಮಂಡಲದ ಪದಾಧಿಕಾರಿಗಳು ಮತ್ತು ಹಳೆ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ನಿಧನ ಶತಾಯುಷಿ ಡಾ। ಎನ್.ವಿ.ಉಪಾಧ್ಯಾಯ



ಖ್ಯಾತ ಆಯುರ್ವೇದ ವೈದ್ಯ, ಶತಾಯುಷಿ ಡಾ। ಎನ್.ವಿ. ಉಪಾಧ್ಯಾಯ (103) ಶುಕ್ರವಾರ (ಎ.15) ಕರಂಗಲ್ಪಾಡಿಯ ಸ್ವಗೃಹದಲ್ಲಿ ನಿಧನ ಹೊಂದಿದರು.

1908ರ ಜುಲೈ 12ರಂದು ನಂದಿಕೂರಿನಲ್ಲಿ ಜನಿಸಿದ್ದ ಅವರು ನಂದಿಕೂರಿನ ಬೋರ್ಡ್ ಸ್ಕೂಲ್ ನಲ್ಲಿ ಪ್ರಾಥಮಿಕ ಶಿಕ್ಷಣ, ಪಾವಂಜೆಯ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸಂಸ್ಕೃತ ವಿದ್ಯಾಭ್ಯಾಸ ಮಾಡಿದ್ದರು. ಸರಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿಗೆ ಸೇರಿ 'ಆಯುರ್ವೇದ ವಿದ್ವಾನ್' ಮತ್ತು ಎಲ್‌ಎಎಂಎಸ್ ಪದವಿ ಗಳಿಸಿದ್ದರು. ಪ್ರಥಮವಾಗಿ ಉಳ್ಳಾಲ ಪೇಟೆಯಲ್ಲಿ ವೈದ್ಯ ವೃತ್ತಿ ಆರಂಭಿಸಿದ ಅವರು ಬಳಿಕ ಮಂಗಳೂರಿನ ರಥಬೀದಿಗೆ ಸ್ಥಳಾಂತರಗೊಂಡು ಅಲ್ಲಿ(ಕಾರ್‌ಸ್ಟ್ರೀಟ್‌ನಲ್ಲಿ) ಆಯುರ್ವೇದ ಚಿಕಿತ್ಸಾಲಯವನ್ನು ಪ್ರಾರಂಭಿಸಿ 6 ದಶಕಗಳಿಗೂ ಹೆಚ್ಚು ಕಾಲ ಆಯುರ್ವೇದ ವೈದ್ಯರಾಗಿ ಸೇವೆ ಸಲ್ಲಿಸಿ ಜನಪ್ರಿಯರಾಗಿದ್ದರು.

ಕರ್ನಾಟಕ ಪ್ರದೇಶ ಆಯುರ್ವೇದ ಮಂಡಲ, ಅಖಿಲ ಭಾರತ ಆಯುರ್ವೇದ ಸಮ್ಮೇಳನ, ಅಖಿಲ ಭಾರತ ಆಯುರ್ವೇದ ವಿದ್ಯಾಪೀಠ, ಕರ್ನಾಟಕ ಆಯುರ್ವೇದ ಚಿಕಿತ್ಸಾ ಅಭಿವೃದ್ಧಿ ಸಲಹಾ ಸಮಿತಿ, ಆಯುರ್ವೇದ ವೈದ್ಯ ಮಂಡಲ ರಿಜಿಸ್ಟ್ರೇಶನ್ ಬೋರ್ಡ್ ಸಂಸ್ಥೆಗಳಲ್ಲಿ ಅವರು ಸಕ್ರಿಯರಾಗಿದ್ದರು. ಕರಂಗಲ್ಪಾಡಿಯ ಶ್ರೀ ಸುಬ್ರಹ್ಮಣ್ಯ ಸಹಕಾರಿ ಬ್ಯಾಂಕ್, ದ.ಕ.ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್, ಮಂಗಳೂರು ತಾಲೂಕು ಭೂ ಅಭಿವೃದ್ಧಿ ಬ್ಯಾಂಕ್ ಇತ್ಯಾದಿ ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ವಿವಿಧ ಹುದ್ದೆಗಳಲ್ಲಿ ದುಡಿದಿದ್ದು, ಹಿರಿಯ ಸಹಕಾರಿ ಧುರೀಣ ಎನಿಸಿದ್ದರು.

ಪಾವಂಜೆಯ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಸ್ಥಾಪನೆ ಮತ್ತು ಮೇಲ್ವಿಚಾರಣಾ ಸಮಿತಿಯ ಸದಸ್ಯರಾಗಿದ್ದ ಅವರು ಕರಂಗಲ್ಪಾಡಿಯ ಶ್ರೀ ಸುಬ್ರಹ್ಮಣ್ಯ ಸಭಾದ ಸ್ಥಾಪಕ ಕಾರ್ಯದರ್ಶಿಯಾಗಿ, ದ.ಕ. ಜಿಲ್ಲಾ ದ್ರಾವಿಡ ಬ್ರಾಹ್ಮಣ ಪರಿಷತ್ತಿನ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಡಾ। ನಂದಿಕೂರು ವೆಂಕಟರಮಣ ಉಪಾಧ್ಯಾಯ ಅವರನ್ನು ದಕ್ಷಿಣ ಕನ್ನಡ ಭಾರತೀಯ ವೈದ್ಯ ಸಂಘ, ಶ್ರೀ ಸುಬ್ರಹ್ಮಣ್ಯ ಸಭಾ ಶತಮಾನೋತ್ಸವ ಸಮ್ಮಾನ, ದ.ಕ.ಜಿಲ್ಲಾ ವಿಪ್ರ ಸಮಾಜ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಉಡುಪಿಯ ಕೃಷ್ಣ ಮಠದಿಂದ 'ಹಿರಿಯ ವೈದ್ಯ ವಿದ್ವಾಂಸ' ಪುರಸ್ಕಾರ, 1954ರಲ್ಲಿ ಅಯೋಧ್ಯೆಯ ಸಂಸ್ಕೃತ ವಿದ್ವತ್ ಪರಿಷತ್ತು 'ಆಯುರ್ವೇದ ರತ್ನ' ಬಿರುದು ಮತ್ತಿತರ ಸಂಘ ಸಂಸ್ಥೆಗಳು ಸಮ್ಮಾನಿಸಿದ್ದವು. ತಾ.24-04-2011ರಂದು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ ಇದರ ಆಡಳಿತ ಮಂಡಳಿಸಭೆಯಲ್ಲಿ ಡಾ। ಎನ್.ವಿ. ಉಪಾಧ್ಯಾಯರ ನಿಸ್ವಾರ್ಥ ಸಮಾಜ ಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿ ಅರ್ಪಿಸಲಾಯಿತು.


Krishna Rao Ph :2520652
Mob. :9902029048

**KISHAN**
Studio & Video

Indoor Photography & Port Folio Photography,
Video & Mixing, Lamination
MAIN ROAD, MAJOOR & BANTAKAL.

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**
ಫೋನ್ : 2556536 (R), 2555466 (0)

**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## THE REGISTRATION OF NEWS PAPERS (CENTRAL) RULES 1956

SCHEDULE
FORM OF DECLARATION
Form 1 (See Rule-3)

I, B. Krishnamoorthy Rao, Ambalpady declare that I am the publisher of the Newspaper entitled "Shri Sharada" to be published at Udupi on behalf of Shree Sthanika Dravida Brahmana Sangha,® and that particulars in respect of the said News Paper given hereunder are true to the best of my knowledge and belief .

| | | | |
|---|---|---|---|
| 1. | Title of the News Paper | : | SHRI SHARADA |
| 2. | Language in which it is to be published | : | KANNADA |
| 3. | Periodicity of this publication | : | a) Monthly<br>b) 15th of every month |
| 4. | Registration No | : | Registered Under No.J/UDP/ 1260/2009-2011 Dated from 01-12-2008 to 30-11-2011.<br>Licenced to Post without Prepayment WPP No. SK/MNG/WPP/69 |
| 5. | Retail selling price of the Newspaper per copy | : | Rs 2-50 |
| 6. | Publisher's Name | : | B. Krishnamoorthy Rao, Ambalpady Secretary, Sri Sthanika Dravida Brahmana Sangha, ® Kunjibettu, Udupi-576102. |
| 7. | Place of Publication | : | Sri Sharada Mantapa, Kunjibettu, Udupi - 576102. |
| 8. | Editor's Name | : | Sri Y.Mohan Rao, Ambalpady |
| | Nationality | : | Indian |
| | Address | : | Sri Sthanika Dravida Brahmana Sangha, ® Kunjibettu, Udupi-576102. |
| 9. | Printer's Name | : | Vishnu Moorthy Tantry |
| | Nationality | | Indian |
| | Address | | Agrahara Offsets, Behind Karnataka Bank, Car Street, Udupi - 576101 |
| 10. | Name of the printing press where the Newspaper is actually printed and the true and precise description of the premises on which the press is installed | : | Agrahara Offsets, Behind Karnataka Bank, Car Street Udupi. |
| 11. | Owner's Name | : | Sri Sthanika Dravida Brahmana Sangha ®, Kunjibettu, Udupi-576102 |
| | a) Individual or Firm | : | Firm |
| | b) Whether the owner owns any Newspaper | : | No |
| 12. | Please state whether the declaration is in respect of | : | a) A Monthly Newspaper |

Date :15-05-2011
Place :UDUPI

Sd/-
The Secretary
For Sri Sthanika Dravida Brahmana Sangha (R), Udupi

## ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿ (ನಿ.)

(ಎಲ್.ನಂ.31017), ಭೂವರಾಹ ಸಂಕೀರ್ಣ, ವಾದಿರಾಜ ರಸ್ತೆ, ಉಡುಪಿ - 576 101.
ಫೋನ್ : 0820-2522408

### ವಿಶೇಷ ಸರ್ವಸದಸ್ಯರ ಸಭೆಯ ನೋಟೀಸು

ನಮ್ಮ ಸೊಸೈಟಿಯ ವಿಶೇಷ ಸರ್ವಸದಸ್ಯರ ಸಭೆಯು ತಾ.28-05-2011ನೇ ಶನಿವಾರ ಅಪರಾಹ್ನ 4-00 ಗಂಟೆಗೆ ಸೊಸೈಟಿಯ ಕಛೇರಿಯಿರುವ ಭೂವರಾಹ ಸಂಕೀರ್ಣದಲ್ಲಿ ನಡೆಯಲಿದೆ. ಮಾನ್ಯ ಸದಸ್ಯರೆಲ್ಲರೂ ಈ ಸಭೆಯಲ್ಲಿ ತಪ್ಪದೇ ಹಾಜರಿರಬೇಕಾಗಿ ವಿನಂತಿ.

### ಕಾರ್ಯಕ್ರಮ

1. 2009-2010ನೇ ಸಾಲಿನ ಲೆಕ್ಕ ಪರಿಶೋಧಕರ ವರದಿಯ ಅಂಗೀಕಾರ
2. 2009-2010ನೇ ಸಾಲಿನ ನಿವ್ವಳ ಲಾಭದ ವಿಂಗಡಣೆ

*ಆಡಳಿತ ಮಂಡಳಿಯ ನಿರ್ದೇಶನದಂತೆ*

ಕಾರ್ಯದರ್ಶಿ ಅಧ್ಯಕ್ಷರು

## ಮಾಂಗಲ್ಯಂ ತಂತುನಾನೇನ ....

ಎಲ್ಲೂರು ಶ್ರೀ ದಿವಾಕರ ರಾವ್ ಮತ್ತು ಶ್ರೀಮತಿ ಸುಮಿತ್ರರಾವ್ ಇವರ ಪುತ್ರಿ **ಅನುಪಮ** ಹಾಗೂ ಉಚ್ಚಿಲ ಶ್ರೀ ಕುಮಾರಸ್ವಾಮಿ ರಾವ್ ಮತ್ತು ಶ್ರೀಮತಿ ವಿಜಯಲಕ್ಷ್ಮೀ ರಾವ್ ಇವರ ಪುತ್ರ **ಸುಮಿತ್** ಇವರ ವಿವಾಹವು ತಾ.11-05-2011 ರಂದು ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಜನಾರ್ಧನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★ ★★★

ಕಾರಿಂಜ ಕೋಡಿ ನಾರಾಯಣ ರಾಯರ ಪುತ್ರಿ **ಅನುರಾಧ** ಹಾಗೂ ರಾಮಕುಂಜ ಭಾಗ್ಯಚಂದ್ರ ರಾಯರ ಪುತ್ರ **ರಾಘವೇಂದ್ರ**, ಇವರ ವಿವಾಹವು ತಾ.25-04-2011ರಂದು ಪಾಣೆಮಂಗಳೂರು ಶ್ರೀ ವೀರವಿಠ್ಠಲ ವೆಂಕಟರಮಣ ಸ್ವಾಮಿ ದೇವಸ್ಥಾನದ ಶ್ರೀ ಸುಕೃತೀಂದ್ರ ಕಲಾಮಂದಿರದಲ್ಲಿ ನೆರವೇರಿತು.

★★★ ★★★

ಎಲ್ಲೂರು ಶ್ರೀಮತಿ ಸಂಧ್ಯಾಕಿರಣ ಮತ್ತು ಶ್ರೀ ಶಿವಪ್ರಸಾದ್ ಇವರ ಪುತ್ರಿ **ಶಿಲ್ಪ** ಹಾಗೂ ಹೆರಂಜಾಲು ಶ್ರೀಮತಿ ಶಾಂತಾ ಮತ್ತು ಶ್ರೀ ಪದ್ಮನಾಭ ಮೇರ್ಟ ಇವರ ಪುತ್ರ **ವಿನಯ ಕುಮಾರ್** ಇವರ ವಿವಾಹವು ತಾ.27-04-2011 ರಂದು ಉಡುಪಿ ರಥಬೀದಿಯಲ್ಲಿರುವ ಶ್ರೀ ರಾಘವೇಂದ್ರ ಸಭಾಭವನದಲ್ಲಿ ನೆರವೇರಿತು.

★★★ ★★★

ಎರ್ಮಾಳು ಶ್ರೀಮತಿ ಕಸ್ತೂರಿ ಮತ್ತು ಶ್ರೀ ಜಯಶಂಕರ ರಾಯರ ಪುತ್ರ **ಮನೋಜ್ ಕುಮಾರ್** ಹಾಗೂ ಶ್ರೀಮತಿ ಮತ್ತು ಶ್ರೀ ಎಚ್. ದಿನಕರ ಮೇರ್ಟ ಇವರ ಪುತ್ರಿ **ದೀಪಿಕಾ** ಇವರ ವಿವಾಹವು ತಾ.27-04-2011 ರಂದು ಕೋಟೇಶ್ವರದ ಶ್ರೀ ಶ್ರೀನಿವಾಸ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಸೀತಾದೇವಿ ಮತ್ತು ಶ್ರೀ ಪಿ.ಡಿ.ಭಾಸ್ಕರ್‌ರಾವ್ ಇವರ ಪುತ್ರಿ **ರೂಪಶ್ರೀ** ಹಾಗೂ ಶ್ರೀಮತಿ ಮಲ್ಲಿಕಾ ಮತ್ತು ಶ್ರೀ ಭವಾನಿ ಶಂಕರರಾವ್ ಇವರ ಪುತ್ರ **ಮುಕುಂದ** ಇವರ ವಿವಾಹವು ತಾ.05-05-2011 ರಂದು ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★ ★★★

ಪರ್ಕಳದ ಶ್ರೀಮತಿ ಮತ್ತು ಶ್ರೀ ಎಮ್.ಕೆ. ಸುಬ್ರಹ್ಮಣ್ಯ ಶರ್ಮರ ಪುತ್ರಿ **ಸೌಮ್ಯ** ಹಾಗೂ ಬೆಂಗಳೂರು ಆರ್.ಟಿ.ನಗರದ ಶ್ರೀಮತಿ ಮತ್ತು ಶ್ರೀ ಕೆಡೆಂಜ ಸುಬ್ರಹ್ಮಣ್ಯ ಶಾಸ್ತ್ರಿ ಇವರ ಪುತ್ರ **ಹರೀಶ** ಇವರ ವಿವಾಹವು ತಾ.05-05-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀ ಶಾರದಾ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

## ಮೀನ ಮಾಸ ವಿಶೇಷ ದಿನಗಳು

| | |
|---|---|
| 15-05-2011 | ವೃಷಭ ಸಂಕ್ರಮಣ |
| 17-05-2011 | ಪೂರ್ಣಿಮಾ |
| 20-05-2011 | ಸಂಕಷ್ಟಹರ ಚತುರ್ಥಿ<br>ಚಂದ್ರೋದಯ ಘಂಟೆ ರಾತ್ರಿ 9-53 |
| 25-05-2011 | ರೋಹಿಣಿ ನಕ್ಷತ್ರಾರಂಭ |
| 28-05-2011 | ಏಕಾದಶೀ |
| 30-05-2011 | ಪ್ರದೋಷಃ, |
| 01-06-2011 | ಅಮಾವಾಸ್ಯಾ |
| 08-06-2011 | ಮೃಗಶಿರಾ ನಕ್ಷತ್ರಾರಂಭ |
| 12-06-2011 | ಏಕಾದಶೀ |
| 13-06-2011 | ಪ್ರದೋಷಃ |
| 15-06-2011 | ಮಿಥುನ ಸಂಕ್ರಮಣ,<br>ಖಗ್ರಾಸ ಚಂದ್ರಗ್ರಹಣ |

## ಉಪನಯನ

### ಚಿ| ರಕ್ಷಿತ್

ಬೆಂಗಳೂರಿನ ಆರ್. ರಮೇಶ ರಾವ್ ಮತ್ತು ಡಾ| ಪದ್ಮಲತಾ ಇವರ ಪುತ್ರ ರಕ್ಷಿತ್ ಇವನ ಬ್ರಹ್ಮೋಪದೇಶವು ತಾ.24-04-2011ರಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಗೌರಿಶಂಕರಕೃಪಾದಲ್ಲಿ ಜರಗಿತು.

★★★★

### ಚಿ| ಶ್ರೀನಿಧಿ

ಹೆರಂಜಾಲು ಶ್ರೀಮತಿ ಸುಧಾ ಮತ್ತು ಶ್ರೀ ಶ್ರೀಪತಿ ಮೇರ್ಟ ಇವರ ಪುತ್ರ ಶ್ರೀನಿಧಿಯ ಬ್ರಹ್ಮೋಪದೇಶವು ತಾ.24-04-2011ರಂದು ತಮ್ಮ ಹೆರಂಜಾಲಿನ ಸ್ವಗೃಹದಲ್ಲಿ ಜರಗಿತು.

★★★★

### ಚಿ| ನಿಖಿಲ್

ಕರ್ವಾಲು ಶ್ರೀ ಸತೀಶ ರಾವ್ ಕೆ. ಮತ್ತು ಶ್ರೀಮತಿ ಶಶಿಕಲಾ ಇವರ ಪುತ್ರ ನಿಖಿಲ್‌ನ ಬ್ರಹ್ಮೋಪದೇಶವು ಕರ್ವಾಲಿನ ಶ್ರೀ ಮಹಾವಿಷ್ಣು ದೇವಸ್ಥಾನದಲ್ಲಿ ತಾ.05-05-2011ರಂದು ಜರಗಿತು.

### ಚಿ| ಕೌಸ್ತುಭ್

ಶ್ರೀಮತಿ ಸುಜಾತ ಮತ್ತು ನವೀನ್ ಕುಮಾರ್ ಇವರ ಪುತ್ರ ಕೌಸ್ತುಭ್‌ನ ಬ್ರಹ್ಮೋಪದೇಶವು ತಾ.5-5-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಜರಗಿತು.

★★★★

### ಚಿ| ಅಜಯ್ ಕುಮಾರ್

ಬೆಳ್ಮಣ್ಣು ಬೈಲುಮನೆ ಶ್ರೀಮತಿ ಮತ್ತು ಶ್ರೀ ಆನಂದರಾಯರ ಪೌತ್ರ ಹಾಗೂ ಶ್ರೀಮತಿ ಪಾವನಾ ಮತ್ತು ಡಾ| ಅರುಣ್‌ಕುಮಾರ್‌ರವರ ಪುತ್ರ ಅಜಯ್ ಕುಮಾರ್‌ನ ಬ್ರಹ್ಮೋಪದೇಶವು ತಾ.6-5-2011ರಂದು ಉಡುಪಿ ಕುಂಜಿಬೆಟ್ಟಿನ ಶ್ರೀಶಾರದಾ ಮಂಟಪದ ಜ್ಞಾನಮಂದಿರದಲ್ಲಿ ಜರಗಿತು.

★★★★

### ಚಿ| ವೈಶಾಖ

ಶ್ರೀಮತಿ ರಂಜಿನಿ ಮತ್ತು ಶ್ರೀ ಚಂದ್ರಶೇಖರ ಇವರ ಪುತ್ರ ವೈಶಾಖನ ಬ್ರಹ್ಮೋಪದೇಶವು ತಾ.6-5-2011ರಂದು ಉಡುಪಿ ರಥಬೀದಿಯಲ್ಲಿರುವ ಭಂಡಾರಕೇರಿ ಮಠದಲ್ಲಿ ಜರಗಿತು.

★★★★

### ಚಿ| ಹೃಷಿಕೇಶ್

ಉರ್ವ ಮಂಗಳೂರಿನ ಶ್ರೀಮತಿ ಹೇಮಲತಾ ಮತ್ತು ಶ್ರೀ ರಾಜೇಂದ್ರ ಕುಮಾರ್ ಇವರ ಪುತ್ರ ಹೃಷಿಕೇಶ್‌ನ ಬ್ರಹ್ಮೋಪದೇಶವು ತಾ.9-5-2011 ರಂದು ಶ್ರೀಕೃಷ್ಣ ಕಲ್ಯಾಣ ಮಂದಿರ, ಮಲ್ಲಿಕಟ್ಟ, ಮಂಗಳೂರು ಇಲ್ಲಿ ಜರಗಿತು.

★★★★

### ಚಿ| ಅನಿರುದ್ಧ

ಬೆಳ್ಮಣ್ಣು ದೇವರಾಯರ ಪೌತ್ರ ವ, ಶ್ರೀಮತಿ ಚೇತನ ಮತ್ತು ಶ್ರೀ ವಿಜಯರಾವ್ ಇವರ ಪುತ್ರ ಅನಿರುದ್ಧನ ಬ್ರಹ್ಮೋಪದೇಶವು ತಾ.5-5-2011 ರಂದು ಬೆಳ್ಮಣ್ಣಿನ ಸ್ವಗೃಹದಲ್ಲಿ ಜರಗಿತು.

---

ಆಡೂರು ಶ್ರೀ ಗಿರಿಧರ ಹಾಗೂ ಶ್ರೀಮತಿ ವಸುಮತಿ ಇವರ ಪುತ್ರಿ **ವೈಶಾಲಿ** ಹಾಗೂ ಶ್ರೀ ರಮಾನಂದ ಮತ್ತು ಶ್ರೀಮತಿ ಪದ್ಮಿನಿ ಇವರ ಪುತ್ರ **ಸನತ್‌ಕುಮಾರ್** ಇವರ ವಿವಾಹವು ತಾ.06-05-2011ರಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಚೊಕ್ಕಾಡಿ ದಿ| ಜನಾರ್ದನ ರಾಯರ ಪೌತ್ರಿ ವ, ಶ್ರೀಮತಿ ಜಯಲಕ್ಷ್ಮೀ ಮತ್ತು ಶ್ರೀ ಸುರೇಶ ಶ್ಯಾನುಭಾಗ್ ಇವರ ಪುತ್ರಿ **ಸುಜಾತ** ಹಾಗೂ ಎಲ್ಲೂರು ಶ್ರೀಮತಿ ಸುನಂದ ಮತ್ತು ದಿ| ಸುಭಾಶ್ಚಂದ್ರ ರಾಯರ ಪುತ್ರ **ವಿವೇಕ್** ಇವರ ವಿವಾಹವು ತಾ.08-05-2011ರಂದು ಉಡುಪಿ ಕಿನ್ನಿಮುಲ್ಕಿಯ ಶ್ರೀ ವೀರಭದ್ರ ಕಲಾಭವನದಲ್ಲಿ ನೆರವೇರಿತು.

## ಬಳ್ಕುಂಜೆ : ಚಂಡಿಕಾಹೋಮ

ಬಳ್ಕುಂಜೆಯಲ್ಲಿ ವಾಸ್ತವ್ಯವಿರುವ ಶ್ರೀ ವಿದ್ಯಾರಣ್ಯ ಹಾಗೂ ಶ್ರೀಮತಿ ಧರ್ಮ ಪ್ರಭಾ ಇವರು ಬಳ್ಕುಂಜೆಯ ತಮ್ಮ ಸ್ವಗೃಹ ''ಸಾಧನಾ''ದಲ್ಲಿ ತಾ.29-4-2011ರಂದು ಚಂಡಿಕಾಹೋಮವನ್ನು ಸಂಪನ್ನಗೊಳಿಸಿದರು.

## ಗೃಹಪ್ರವೇಶ

ಮುಂಬೈಯಲ್ಲಿ ವಾಸವಾಗಿರುವ ಶ್ರೀಮತಿ (ಡಾ|) ಎಮ್. ಪ್ರಶಾಂತಿ ರಾವ್ ಮತ್ತು ಶ್ರೀ ಬಿ.ಎಸ್.ವಾದಿರಾಜನ್ ಇವರು ನವೀ ಮುಂಬಯಿಯ ಕಾರ್‌ಗರ್‌ನಲ್ಲಿ ನೂತನವಾಗಿ ನಿರ್ಮಿಸಿದ ಗೃಹದ ಪ್ರವೇಶೋತ್ಸವವನ್ನು ತಾ.10-10-2010ರಂದು ನೆರವೇರಿಸಿದರು.

## ಶುಭ ಜನನ

ಅಮೇರಿಕದ ಸ್ಯಾಂಡಿಯಾಗೋದಲ್ಲಿ ನೆಲೆಸಿರುವ ಶ್ರೀ ವಿಜಯ್ ಬಂಟ್ವಾಳ್ (ಶ್ರೀಮತಿ ಗೀತಾ ಮತ್ತು ಶ್ರೀ ನಟೇಶ ರಾವ್, ಹೈದರಾಬಾದ್ ಇವರ ಮಗ) ಮತ್ತು ಡಾ| ಸೌಮ್ಯಾ (ಶ್ರೀಮತಿ ರೇಖಾ ಮತ್ತು ಶ್ರೀ ಜಿ.ಕೆ.ರಾವ್, ಬೆಂಗಳೂರು ಇವರ ಮಗಳು) ರವರಿಗೆ ತಾ.19-4-2011ರಂದು ಹೆಣ್ಣು ಮಗುವಿನ ಜನನ.

★★★★

ಉಡುಪಿ ಚಿಟ್ಪಾಡಿಯ ಶ್ರೀ ಯೋಗೀಶ ರಾವ್ ಮತ್ತು ಶ್ರೀಮತಿ ಸುಧಾಶ್ರೀ ದಂಪತಿಗಳಿಗೆ ತಾ.25-4-2011ರಂದು ಹೆಣ್ಣು ಮಗುವಿನ ಜನನ.

## ವಿಳಾಸ ಬದಲಾವಣೆ

**T. B. MOHAN RAO**
"Bhagavatha",
D.No.7-1-85/22
Dattaprasad Layout,
2nd Cross, Sultan Battery Road,
Ashok Nagar P.O.,
Mangalore - 575 006.

★★★★

**SMT. (DR.) PRASHANTHI N. RAO**
W/o B.S.Vadirajan
No.601/6, Sawan's Pride,
Plot No.10/11, Sector 18,
Kharghar, Navimumbai-410210.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ವಿಷಾಹಾರ ಸೇವನೆ (Food Poisioning) ಹೇಗಾಗುತ್ತದೆ?**

**ಡಾ| ವೈ. ಸುದರ್ಶನ ರಾವ್**

**ಉತ್ತರ :** ನೀವು ಕೆಲವೊಮ್ಮೆ ವಿಶೇಷ ಸಂದರ್ಭದಲ್ಲಿ ಅಥವಾ ಶಾಲೆಯಲ್ಲಿ ಊಟ ಮಾಡುತ್ತಿದ್ದವರು ಇದ್ದಕ್ಕಿದ್ದಂತೆಯೇ ಹೊಟ್ಟೆ ನೋವಿನಿಂದ ನರಳುತ್ತಾ ವಾಂತಿಮಾಡಿಕೊಂಡು ಆಸ್ಪತ್ರೆಗೆ ದಾಖಲಾದ ವರದಿಗಳನ್ನು ಕೇಳಿರಬಹುದು. ಇದನ್ನು ವಿಷಾಹಾರ ಸೇವನೆ ಎನ್ನುತ್ತೇವೆ.

ವಿಷಾಹಾರ ಸೇವನೆಯಲ್ಲಿ ಎರಡು ಬಗೆಗಳಿವೆ. ಒಂದನೆಯದು ಆಹಾರದಲ್ಲಿ ರಾಸಾಯನಿಕ ವಸ್ತುಗಳ ಕಲಬೆರಕೆಯಾಗಿದ್ದು ಅಥವಾ ಆಕಸ್ಮಿಕವಾಗಿ ಒಂದು ಆಹಾರ ಪದಾರ್ಥದ ಬದಲು ಇಂಥಹಾ ರಾಸಾಯನಿಕಗಳನ್ನು ಅಡುಗೆಗೆ ಬಳಸಿದ್ದರೆ, ಅದನ್ನು ತಿಂದವರು ಈ ರಾಸಾಯನಿಕದ ಅಡ್ಡಪರಿಣಾಮಗಳ ಮೊದಲ ಚಿಹ್ನೆಯಾಗಿ ಹೊಟ್ಟೆನೋವು ವಾಂತಿ ಇತ್ಯಾದಿಗಳಿಂದ ಬಳಲುವರು. ಮುಂದೆ ವಿವಿಧ ಪರೀಕ್ಷೆಗಳ ಮೂಲಕ ಈ ಚಿಹ್ನೆಗಳಿಗೆ ಕಾರಣವಾದ ರಾಸಾಯನಿಕವನ್ನು ಪತ್ತೆಹಚ್ಚಲು ಸಾಧ್ಯವಾಗಬಹುದು.

ಇನ್ನು ಕೆಲವು ಬ್ಯಾಕ್ಟೀರಿಯಾಗಳಿಗೆ ಸ್ವತಃ ಇಂತಹಾ ವಿಷ ವಸ್ತುಗಳನ್ನು ತಯಾರಿಸುವ ಶಕ್ತಿ ಇದೆ. ಈ ವಿಷ ವಸ್ತುವನ್ನು ಟೋಕ್ಸಿನ್ (toxin) ಎಂದು ಕರೆಯುತ್ತೇವೆ. ತಿನ್ನುವ ಆಹಾರದಲ್ಲಿ ಇಂತಹಾ ಬ್ಯಾಕ್ಟೀರಿಯಾಗಳು ಸ್ವಲ್ಪ ಸಮಯ ಇದ್ದರೆ ಅವು ಟೋಕ್ಸಿನ್‌ಗಳನ್ನು ಉತ್ಪಾದಿಸುವವು. ಇಂತಹಾ ಟೋಕ್ಸಿನ್ ಯುಕ್ತ ಆಹಾರವನ್ನು ಸೇವಿಸಿದವರು ಸ್ವಲ್ಪ ಹೊತ್ತಿನಲ್ಲೇ ಹೊಟ್ಟೆನೋವು, ವಾಂತಿ ಇತ್ಯಾದಿ ಚಿಹ್ನೆಗಳಿಂದ ಬಳಲುವರು. ಕೆಲವೊಮ್ಮೆ ಇಂತಹಾ ಬ್ಯಾಕ್ಟೀರಿಯಾಗಳು ಆಹಾರದ ಮೂಲಕ ದೇಹವನ್ನು ಪ್ರವೇಶಿಸಿದ ಮೇಲೆ ಟೋಕ್ಸಿನ್‌ಗಳನ್ನು ಉತ್ಪಾದಿಸುವವು. ಆಗ ಖಾಯಿಲೆಯ ಚಿಹ್ನೆಗಳು ಕಾಣಿಸಿಕೊಳ್ಳಲು ಒಂದು ದಿನದ ಕಾಲಾವಕಾಶ ಬೇಕಾಗಬಹುದು.

ಈ ಟೋಕ್ಸಿನ್‌ಗಳನ್ನು ಉತ್ಪಾದಿಸಬಲ್ಲ ಬ್ಯಾಕ್ಟೀರಿಯಾಗಳು ಹೆಚ್ಚಾಗಿ ಪ್ರಾಣಿಗಳನ್ನು ಬಾಧಿಸುವಂತಹಾ ಜೀವಾಣುಗಳು. ಪ್ರಾಣಿಗಳಲ್ಲಿ ಗಾಯದಲ್ಲಿ ಕೀವು, ರಶಿಗೆ ಇತ್ಯಾದಿಗಳನ್ನು ಉಂಟು ಮಾಡುವ ಈ ಜೀವಾಣುಗಳು ಮಿಶ್ರಿತವಾದ ಆಹಾರ ಪದಾರ್ಥ ಹೆಚ್ಚಾಗಿ ಪ್ರಾಣಿಜನ್ಯವಾಗಿರುತ್ತದೆ. ಅಂದರೆ ಮಾಂಸ, ಮೊಟ್ಟೆ ಮತ್ತು ಹಾಲು (ಉದಾ: ಕೆಚ್ಚಲಲ್ಲಿ ಕೀವಾಗಿರುವ ದನದ ಹಾಲು ಸೇವನೆ). ಹುಳುಕು ಹಿಡಿದ ಹಳೆಯ ಬೇಳೆಕಾಳುಗಳನ್ನು ಬಳಸುವುದೂ ಇನ್ನೊಂದು ಮುಖ್ಯ ಕಾರಣ. ಅಷ್ಟೇ ಅಲ್ಲದೆ ಅಡುಗೆ ಮಾಡುವವರಲ್ಲೂ ಇಂತಹ ಕೀವು ಇರುವ ವ್ರಣಗಳಿದ್ದು ಅದರ ನೀರು ಆಹಾರದ ಸಂಪರ್ಕಕ್ಕೆ ಬಂದರೂ ಇಂತಹಾ ಬ್ಯಾಕ್ಟೀರಿಯಾಗಳು ಆಹಾರದ ಮೂಲಕ ನಮ್ಮ ದೇಹವನ್ನು ಪ್ರವೇಶಿಸುತ್ತವೆ. ತಂಗಳು ಆಹಾರದಲ್ಲಿ ಇಂತಹಾ ಬ್ಯಾಕ್ಟೀರಿಯಾಗಳಿರುವ ಸಾಧ್ಯತೆ ಹೆಚ್ಚು.

ಆಹಾರ ಸೇವಿಸುತ್ತಿದ್ದ ಸುಮಾರು ಜನರು ಒಮ್ಮೆಲೇ ಹೊಟ್ಟೆ ನೋವಿನಿಂದ ಬಳಲುತ್ತಾ ವಾಂತಿ ಮಾಡಿಕೊಳ್ಳುವುದು, ಬೇಧಿಯಾಗುವುದು ಹಾಗೂ ಆ ಕೂಡಲೇ ಅಸ್ವಸ್ಥರಾಗುವುದು ಈ ವಿಷಾಹಾರ ಸೇವನೆಯ ಚಿಹ್ನೆಗಳು. ಇಂತಹಾ ಕೇಸುಗಳು ಕೆಲವೊಮ್ಮೆ ಮಾರಣಾಂತಿಕವಾಗುವ ಸಾಧ್ಯತೆ ಇರುವುದರಿಂದ ತಕ್ಷಣ ವೈದ್ಯರಿಂದ ಚಿಕಿತ್ಸೆ ಪಡೆಯಬೇಕು.

ವಾಂತಿಬೇಧಿ ಕಾಯಿಲೆಗೂ ವಿಷಾಹಾರ ಸೇವನೆಗೂ ಇರುವ ವ್ಯತ್ಯಾಸವೇನೆಂದರೆ ವಾಂತಿಬೇಧಿ ಕಾಯಿಲೆಯು ನೀರು ಮತ್ತು ಆಹಾರಕ್ಕೆ ಮಲ ಪದಾರ್ಥದ ಸಂಪರ್ಕ ಬಂದು ಮಲದಲ್ಲಿರುವ ಬ್ಯಾಕ್ಟೀರಿಯಾಗಳು ನಮ್ಮ ಕರುಳಿನಲ್ಲಿ ಬೆಳೆದು ಖಾಯಿಲೆ ಚಿಹ್ನೆಗಳು ಬರುವಂತಾದ್ದು. ಇಂತಹಾ ಮಲಿನ ಆಹಾರ ಸೇವಿಸಿ ಈ ಚಿಹ್ನೆಗಳು ಕಾಣಲು 2-3 ದಿನಗಳು ಬೇಕಾಗುತ್ತದೆ. ಕುದಿಸಿದ ನೀರನ್ನು ಮತ್ತು ಚೆನ್ನಾಗಿ ಬೇಯಿಸಿದ ಆಹಾರವನ್ನು ಉಪಯೋಗಿಸುವ ಮೂಲಕ ಮತ್ತು ಆಹಾರವನ್ನು ತಯಾರಿಸುವವರೂ, ಹಂಚುವವರೆಲ್ಲರೂ ಸಾರ್ವತ್ರಿಕವಾಗಿ ಶುಚಿತ್ವದ ಕ್ರಮಗಳನ್ನು ಅನುಸರಿಸಿದರೆ ನಾವು ವಾಂತಿಬೇಧಿ ಖಾಯಿಲೆಗಳನ್ನು ತಡೆಗಟ್ಟಬಹುದು.

ಆದರೆ ವಿಷಾಹಾರ ಸೇವನೆಯ ವಿಷಯದಲ್ಲಿ ಬ್ಯಾಕ್ಟೀರಿಯಾಗಳು ಟೋಕ್ಸಿನ್‌ಗಳನ್ನು ಆಹಾರದಲ್ಲಿ ಮೊದಲೇ ಉತ್ಪಾದಿಸಿಟ್ಟಿರುವುದರಿಂದ ಆಹಾರವನ್ನು ಸರಿಯಾಗಿ ಬೇಯಿಸಿ ಬ್ಯಾಕ್ಟೀರಿಯಾಗಳನ್ನು ಕೊಂದಿದ್ದರೂ, ಇಂತಹಾ ಆಹಾರ ಸೇವಿಸಿದರೆ ಕಾಯಿಲೆಯ ಚಿಹ್ನೆಗಳನ್ನು ತಡೆಗಟ್ಟಲು ಸಾಧ್ಯವಿಲ್ಲ.

ಹಾಗಾಗಿ ವಿಷಾಹಾರ ಸೇವನೆಯನ್ನು ತಡೆಗಟ್ಟಬೇಕಾದರೆ ಬಳಸುವ ಆಹಾರ ಪದಾರ್ಥವು ಮೂಲದಲ್ಲೇ ಉತ್ತಮ ಗುಣಮಟ್ಟದ್ದಾಗಿರಬೇಕಾಗುತ್ತದೆ.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ರತ್ನಾ ಬ್ಯಾ ಸ್ಮಾರಕ ಸಾಲ ವಿದ್ಯಾರ್ಥಿ ವೇತನ : ರೂ.4,00,000/- ದೇಣಿಗೆ

ಡಾ| ದಯಾನಂದ ಎಸ್.ರಾವ್ ಎಜ್ಯುಕೇಶನ ಟ್ರಸ್ಟ್ ಬೆಂಗಳೂರು ಇವರು ''ರತ್ನಾ ಬ್ಯಾ ಸ್ಮಾರಕ ಸಾಲ ವಿದ್ಯಾರ್ಥಿ ವೇತನ''ಕ್ಕಾಗಿ ರೂ.4,00,000/- ನಗದು ನೀಡಿದ್ದಾರೆ. ಇವರು ಕಳೆದ 5 ವರ್ಷಗಳಲ್ಲಿ ಒಟ್ಟು ರೂ.15,00,000/- ಧನಸಹಾಯವನ್ನು ಒದಗಿಸಿದ್ದಾರೆ. ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ಕಾಲೇಜುಗಳಲ್ಲಿ ಸೇರಬಯಸುವ ಇಂಜಿನಿಯರಿಂಗ್ ಮತ್ತು ಮೆಡಿಕಲ್ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು. ಉತ್ತಮ ಪ್ರಗತಿ ಸಾಧನೆ ಆಧಾರದ ಮೇಲೆ ಪ್ರೊಫೆಷನಲ್ ಕೋರ್ಸಿನ ಇಡೀ ಅವಧಿಯಲ್ಲಿ ಈ ಸಾಲ ವಿದ್ಯಾರ್ಥಿ ವೇತನ ಮುಂದುವರೆಯುತ್ತದೆ.

ವಿಶ್ವದ ಒಬ್ಬೊಬ್ಬ ವ್ಯಕ್ತಿಯ ಸಮಗ್ರ ವ್ಯಕ್ತಿತ್ವ ನಿರ್ಮಾಣಕ್ಕೆ ವಿದ್ಯಾರ್ಜನೆಯೇ ಸೋಪಾನ ಎನ್ನುವ ಡಾ| ದಯಾನಂದ ಎಸ್.ರಾವ್ ತಮ್ಮ ಬದುಕಿನ ಹೋರಾಟದಲ್ಲಿ ತನಗೆ ಭೀಮ ಬಲವಾಗಿ ಜತೆ ನೀಡಿದ ವಿದ್ಯೆಯನ್ನು ತಾನು ಏರಿಬಂದ ಏಣಿಯನ್ನು ಎಂದೂ ಮರೆತವರಲ್ಲ.

ಯಾರಿಗಾದರೂ ಕೊಡಲು ಶಕ್ತನಾದರೆ ತನ್ನ ಮೊದಲ ಆದ್ಯತೆ ವಿದ್ಯಾರ್ಜನೆಗೆ ಸಹಾಯ ಮಾಡುವುದು ಎಂಬ ತತ್ವಕ್ಕೆ ಬದ್ಧವಾದ ಅವರು ಎಜ್ಯುಕೇಶನ್ ಟ್ರಸ್ಟ್ ಸ್ಥಾಪಿಸಿದ್ದಾರೆ. ಅರ್ಹ ವಿದ್ಯಾರ್ಥಿಗಳಿಗೆ ಸಾಲ ರೂಪದಲ್ಲಿ ವಿದ್ಯಾರ್ಥಿ ವೇತನ ನೀಡುವ ಉದ್ದೇಶದಿಂದ ನಮ್ಮ ಸಮಾಜದ ಸಾಮಾಜಿಕ ಸಂಘಟನೆಗಳಿಗೆ ಸಾಲ ನಿಧಿಯನ್ನು ಮಂಜೂರು ಮಾಡುತ್ತಾರೆ. ಅದಕ್ಕೆ ಅವರ ಕಟ್ಟುನಿಟ್ಟಿನ ಶರತ್ತುಗಳಿವೆ.

ಡಾ| ದಯಾನಂದ ಎಸ್. ರಾವ್ ಅವರಿಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು, ಉಡುಪಿ ತುಂಬುಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಈ ವಿಶೇಷ ಧನಸಹಾಯವನ್ನು ಪಡೆಯಲು ಶ್ರಮಿಸಿದ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಸ್.ರಾವ್ ಅವರಿಗೂ ಕೃತಜ್ಞತೆಗಳು.

## ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.)

### ವಸತಿ ಸಮುಚ್ಚಯ ಯೋಜನೆ

ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಮತು ಮಂಗಳೂರು ನಗರದ ಸರಹದ್ದಿನಲ್ಲಿ ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.), ಮಂಗಳೂರು ಇದರ ಪ್ರಾಯೋಜಕತ್ವದಲ್ಲಿ ವಸತಿ ಸಮುಚ್ಚಯದ ಯೋಜನೆಯೊಂದು ರೂಪುಗೊಳ್ಳುತ್ತಿದೆ. ಮಧ್ಯಮ ವರ್ಗ ಹಾಗೂ ಕೆಳ ಮಧ್ಯಮ ವರ್ಗದ ಸಮಾಜ ಬಾಂಧವರ ಅನುಕೂಲಕ್ಕಾಗಿ ರೂಪುಗೊಂಡ ಈ ಯೋಜನೆಯಡಿಯಲ್ಲಿ ಫ್ಲ್ಯಾಟ್‌ಗಳನ್ನು ಬಯಸುವ ಸಮಾಜ ಬಾಂಧವರು ಹೆಚ್ಚಿನ ವಿವರಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿರಿ.

**ಶ್ರೀ ಬಿ. ವಿಷ್ಣುರಾವ್**
ಶಾಖಾ ಕಾರ್ಯನಿರ್ವಹಣಾಧಿಕಾರಿ
ಪುತ್ತೂರು
ಫೋನ್ : 08251-235895

**ಶ್ರೀ ಸುಮಿತ್**
ಶಾಖಾ ಕಾರ್ಯನಿರ್ವಹಣಾಧಿಕಾರಿ
ಮಂಗಳೂರು
ಫೋನ್ : 0824-2491895
ಮೊಬೈಲ್ : 9980313041

**ಶ್ರೀ ರಾಜೇಶ್ ಎಂ.ಬಿ.**
ಮುಖ್ಯಕಾರ್ಯನಿರ್ವಹಣಾಧಿಕಾರಿ, ಮಂಗಳೂರು
ಫೋನ್ : 0824-2491895, ಮೊಬೈಲ್ : 9481583134

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

ಮಂಗಳಾರತಿ : ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ

ಪ್ರತಿ ಬುಧವಾರ : **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಶುಕ್ರವಾರ : **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ)

ಪ್ರತಿ ಆದಿತ್ಯವಾರ : ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ

**ಸಂಕಷ್ಟಹರ ಚತುರ್ಥಿಯಂದು (ತಾ.20-05-2011) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

2ನೇ ಶನಿವಾರ : **ತಾ.11-06-2011 ''ಗಮಕವಾಚನ'' ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)**

**ತಾ.22-05-2011** ಫಾಲ್ಗುಣ ಮಾಸ ಕೃಷ್ಣಪಕ್ಷ ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ

**ತಾ.20-05-2011** ಶುಕ್ರವಾರ ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**




**PRAMOD** AUTOMOBILES
30 Years of Service
Ph : 2493633 (0)
2493633 (H.O.)
2212723 (R)
Mobile : 9448260225
KARANGALPADY, MANGALORE - 575 003.
: Wholesale & Retail Dealers in :
2 & 3 WHEELERS SPARES & ACCESSORIES
Prop. : Ln.K. HARSHA KUMAR



**RAJESH POWER PRESS**
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

**Buying and selling shares as easy as checking your emails**

Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com



Sharekhan YOUR GUIDE TO THE FINANCIAL JUNGLE
Visit : www.sharekhan.com

Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ಎಮ್. ದೇವಾನಂದ್ ಭಟ್
Cell : 9845644556
**ಶೋಭಾ ಡಿಜಿಟಲ್**
ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ



ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.

**ರಾಮಾ ಅಟೋಮೊಬೈಲ್ಸ್**
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702



ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ



Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org